ಓ..... ದೈವಜ್ಞರೇ ಸ್ವಧರ್ಮ ಉಳಿಸಿರಿ, ಸ್ವಾಭಿಮಾನಿಗಳಾಗಿ...

ಭರತ ಖಂಡ ಪುಣ್ಯ ಭೂಮಿ, ಕರ್ಮ ಭೂಮಿ. ಈ ಭೂಮಿಯ ಮೇಲಿನ 700 ಕೋಟಿ ಜನ ಸಂಖ್ಯೆಯಲ್ಲಿ 120 ಕೋಟಿ ಭಾರತದಲ್ಲಿರುವರು ಅವರಲ್ಲಿ 90 ಕೋಟಿ ಹಿಂದೂಗಳು. ಪ್ರಪಂಚದ ಯಾವುದೇ ಮತ-ಧರ್ಮದವರು ಹಿಂದೂಗಳ ಹಾಗೆ ದೇವರು-ಸನ್ಯಾಸಿ-ಸಂತರನ್ನು ಪೂಜಿಸುವುದಿಲ್ಲ. ದೇಶದ ದಕ್ಷಿಣದಲ್ಲಿ 8ನೇ ಶತಮಾನದಲ್ಲಿ ಶ್ರೀ ಆದಿ ಶಂಕರಾಚಾರ್ಯರು, 12ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು, 13ನೇ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು, 15ನೇ ಶತಮಾನದಲ್ಲಿ ಶ್ರೀ ವಾದಿರಾಜ ಗುರುಗಳು, 20ನೇ ಶತಮಾನದಲ್ಲಿ ಶ್ರೀ ಶ್ರೀ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಸ್ವಾಮಿಗಳು ಅವತರಿಸಿದರು. ಇವರ್ಯಾರು ಸ್ವರ್ಗ ಆಕಾಶದಿಂದ ಭೂಮಿಗೆ ಇಳಿದು ಬಂದವರಲ್ಲ. ಸ್ವಂತ ತಾಯಿಯ ಉದರಲ್ಲಿ ಜನಿಸಿದವರು. ಜನರ ಆಚಾರ, ಶಾಸ್ತ್ರಗಳೇ ಸನ್ಯಾಸ ನೀಡಿ, ಜನರೇ ತಮಗಾಗಿ ಇವರನ್ನು ಗುರುಗಳನ್ನಾಗಿ ಮಾಡಿಕೊಂಡರು.

ಈ ಮೇಲಿನ ಸ್ವಾಮಿಗಳಲ್ಲಿ ಜಗದ್ಗುರು ಶ್ರೀ ಶಂಕರಾಚಾರ್ಯರು ಹಾಗೂ ಅವರ ಪರಂಪರೆಯವರು ಮಾತ್ರ ಸನಾತನ ಹಿಂದೂ ಧರ್ಮವನ್ನು ನಿಜವಾದ ಅರ್ಥದಲ್ಲಿ ಉದ್ಧಾರ ಮಾಡಿರುವರು. ಉಳಿದವರು ಕೇವಲ ಅವರ ಮಾಧ್ವ, ವೈಷ್ಣವ ಮತವನ್ನು ಉದ್ಧಾರ ಮಾಡಿದ್ದಾರೆ.

"ಸ್ವಧರ್ಮಂ ನಿಧನಂ ಶ್ರೇಯ" ಅಂದರೆ ಸ್ವಂತ ಧರ್ಮ ಪಾಲನೆಯಿಂದ ಶ್ರೇಯಸ್ಸು, ಮೋಕ್ಷ ದೊರೆಯುತ್ತದೆ. ಇತರ ಮತಗಳು ಮಲತಾಯಿ ಇದ್ದಂತೆ ಅದರಿಂದ ಸ್ವಂತ ತಾಯಿಯಿಂದ ದೊರೆಯುವ ಪ್ರೀತಿ, ಮಮತೆ, ಲಾಲನೆ-ಪಾಲನೆ, ಸಂಸ್ಕಾರ ದೊರೆಯಲಾರದು. ಇದರ ಮಹತ್ವ ದೈವಜ್ಞರಿಗೆ ಇನ್ನೂ ತಿಳಿದಿಲ್ಲವೆಂದೇ ಕಾಣುತ್ತದೆ. ನಾವು ನಮ್ಮ ಸ್ವಂತ ಮಗುವನ್ನು ಉಪವಾಸಕ್ಕೆ ಕೆಡವಿ ಬೇರೆಯವರ ಮಗುವಿನ ಉದ್ಧಾರಕ್ಕೆ ನಮ್ಮ ತನು-ಮನ-ಧನವನ್ನು ವಿನಿಯೋಗಿಸುತ್ತಿದ್ದೇವೆ.

"ತನ್ನ ಮರಿ ಹೊನ್ನಮರಿ, ಪರರ ಮರಿ ಕಾಗೆಮರಿ" ಎಂಬ ಗಾದೆ ಮಾತಿದೆ. ದೈವಜ್ಞರಿಗೆ ಮಾತ್ರ "ಪರರ ಮರಿ ಹೊನ್ನಮರಿ, ತನ್ನ ಮರಿ ಕಾಗೆಮರಿ" ಎಂಬಂತೇ ವರ್ತಿಸುತ್ತಿದ್ದಾರೆ. ನಮ್ಮದೇ ಸ್ವ-ಸಮಾಜದ, ಸ್ವ-ಧರ್ಮದ ಯೋಜನೆ, ಕಾರ್ಯಗಳಿಗೆ ಸಹಕಾರ, ಧನಸಹಾಯ ನೀಡುವುದು ಬಿಟ್ಟು ಸ್ವಾಭಿಮಾನವಿಲ್ಲದ ಕೆಲವರು ಸಮಾಜ ಬಾಂಧವರು, ದೈವಜ್ಞ ಸಮಾಜ ಬಾಂಧವರಿಂದ ಕೋಟಿಗಟ್ಟಲೇ ಹಣವನ್ನು ಸಂಗ್ರಹಿಸಿ, ಉಡುಪಿ ಸೋದೆ ಮಠಕ್ಕೆ ನೀಡಿ ಪೇಪರಿನಲ್ಲಿ ತಮ್ಮ ಹೆಸರು ಮಾತ್ರ ಬರುವಂತೆ ಮಾಡಿ ತಮ್ಮ ಪ್ರತಿಷ್ಠೆಯನ್ನು ಬೆಳೆಸಿ ಆ ಮೂಲಕ ತಮ್ಮ ವ್ಯಾಪಾರ, ವಹಿವಾಟುಗಳನ್ನು ವಿಸ್ತರಿಸಿಕೊಳ್ಳುತ್ತಾರೆ.

ಇವರಿಂದ ನಮ್ಮ ದೈವಜ್ಞ ಸಮಾಜಕ್ಕೆ ಪ್ರಯೋಜನವಿಲ್ಲ. ಈ ಹಿಂದೆ 1952 ರಲ್ಲಿ ಧರ್ಮಸ್ಥಳ ರಥಕ್ಕೆ ರಜತ ಮಂಟಪ, ಅನ್ಯ ಪಂಗಡದ ಸೋದೆ ಸ್ವಾಮಿಗೆ ರಜತ ಪೀಠ ದ್ವಾರ, ಹೂವಿನ ಕೆರೆಯಲ್ಲಿ ಸೊಂದಾದಲ್ಲಿ ಕಟ್ಟಡ ಗೋಪುರ.

ದೈವಜ್ಞ ಸಮಾಜದವರಿಂದ ಹಣ ವಸೂಲಿ ಮಾಡಿ ಅನ್ಯ ಪಂಗಡವರಿಗೆ "ಕೃಷ್ಣಾರ್ಪಣ" ಮಾಡಿ ಅಷ್ಟಮಠದ ಆಸ್ಥಾನದಲ್ಲಿ ತಾವು ಮಾತ್ರ ಸನ್ಮಾನ ಗಳಿಸಿದರು. ಇಷ್ಟೆಲ್ಲಾ ಅಲ್ಲಿ ನಾವು ಕೊಟ್ಟ ಮೇಲೂ ನಮಗೆ ಸಿಕ್ಕಿದ ಪ್ರತಿಫಲ ಏನು ಗೊತ್ತೇ? ಸೋದೆ ಸ್ವಾಮಿಗಳಿಂದ ದೈವಜ್ಞರು ಬ್ರಾಹ್ಮಣರೇ ಅಲ್ಲ! ಎಂಬ ನಿಂದನೆಯ ಮಾತುಗಳು!! ಸಪ್ತ ಋಷಿ ಮೂಲದ ಸಪ್ತ ಗೋತ್ರ ಆಧಾರಿತ ದೈವಜ್ಞ ಬ್ರಾಹ್ಮಣರ ಮನೆಯಲ್ಲಿ ನಡೆಯುವಂತ ಪೂಜೆಯು ಭಾರತದ ಯಾವ ಬ್ರಾಹ್ಮಣರ ಮನೆಯಲ್ಲಿ ನಡೆಯುವುದಿಲ್ಲ. ಉದಾ: ಯುಗಾದಿ, ನಾಗರಪಂಚಮಿ, ವರಮಹಾಲಕ್ಷ್ಮೀ ಪೂಜೆ, ಚೂಡಿ ಪೂಜೆ (ಶ್ರಾವಣದಲ್ಲಿ) ಕೃಷ್ಣಾಷ್ಟಮಿ, ಗೌರಿಪೂಜೆ, ಗಣೇಶ ಚತುರ್ಥಿ, ಜೇಷ್ಟ ಲಕ್ಷ್ಮೀ ಪೂಜೆ, ಅನಂತ ಚತುರ್ದಶಿ ಪೂಜೆ, ನವರಾತ್ರಿಯಲ್ಲಿ ದುರ್ಗಾಪೂಜೆ, ದೀಪಾವಳಿ, ತುಳಸಿಪೂಜೆ, ಕಾರ್ತಿಕ ಪೂಜೆ, ದತ್ತ ಜಯಂತಿ, ಗುರುಪೂರ್ಣಿಮ, ಮಕರ ಸಂಕ್ರಾಂತಿ, ಶಿವರಾತ್ರಿ ನರಸಿಂಹ ಜಯಂತಿ, ಕುಲದೇವತಾ ಪೂಜೆ, ರಾಮನವಮಿ, ಇತ್ಯಾದಿ ಪೂಜೆಗಳನ್ನು ಮಾಡುವ ದೈವಜ್ಞ ಬ್ರಾಹ್ಮಣನಿಗೆ ಸೋದೆ ಮಠದಲ್ಲಿ ಸಿಕ್ಕಿದ ಮರ್ಯಾದೆ ಸೋನಗಾರನೋ ಅಥವಾ ಶೂದ್ರವೆಂಬ ಅಂಕಿತನಾಮ. "ಮನೆಗೆ ಮಾರಿ, ಊರಿಗೆ ಉಪಕಾರಿ" ಗಳಾದ ಈ ಪ್ರಚಾರ ಪ್ರಿಯರಾದ ಉಡುಪಿ ಮಠಗಳ ಚೇಲಾಗಳ ಬಗ್ಗೆ ಸಮಸ್ತ ದೈವಜ್ಞ ಬ್ರಾಹ್ಮಣ ಸಮಾಜ ಜಾಗೃತವಾಗಬೇಕು. ನಮ್ಮ ಪ್ರಾಮಾಣಿಕ ದುಡಿಮೆಯ ಒಂದು ಭಾಗ ದಾನ ರೂಪದಲ್ಲಿ ನಮ್ಮದೇ ಸ್ವ-ಸಮಾಜ ಗುರುಪೀಠ, ದೇವಸ್ಥಾನ, ಸಂಘ ಸಂಸ್ಥೆಗಳಿಗೆ ಬಳಕೆಯಾಗಬೇಕು. ನಮ್ಮ ದುಡಿಮೆ ಅನ್ಯ ಪಂಗಡದವರ ಆಸ್ತಿಯಾಕಾಗಬೇಕು?

ಇಂದು ದೈವಜ್ಞ ಬಂಧು ಜಾಗೃತನಾಗಿದ್ದಾನೆ, ಇಂದಿನ ಬುದ್ಧಿವಂತ, ವಿಚಾರವಂತ ದೈವಜ್ಞರ ಪೀಳಿಗೆ ಕುರಿಮಂದೆಯಂತೆ ಕೆಲವೇ ಶ್ರೀಮಂತರು ಹೇಳಿದಂತೆ ಎಲ್ಲವನ್ನೂ ನಂಬಲಿಲ್ಲ. ಆತ ಚಿಂತಿಸಿದ, ಮಂಥಿಸಿದ, ದೈವ ಪ್ರೇರಣೆಯಂತೆ ಜ್ಞಾನೋದಯ ಹೊಂದಿ ಕೊನೆಗೂ ತನ್ನ ಸರಿಯಾದ ಮೂಲವನ್ನು ಕಂಡುಕೊಂಡ. ಅದಕ್ಕೆ ಪೂರಕವಾಗಿ ಸ್ವಂತ ಸಮಾಜದ ಶ್ರೀ ಗುರುಪೀಠವನ್ನು ಸ್ಥಾಪಿಸಿ ತನ್ನ ಸ್ವಂತಿಕೆ, ಸ್ವಾಭಿಮಾನ ಮೆರೆದ ದೈವಜ್ಞ ಸಮಾಜ ಚಿರಾಯುವಾಗಲಿ.

ಪ್ರಿಯ ಓದುಗ ಸಮಾಜ ಬಾಂಧವರೇ, ನೀವು ನಿಜವಾಗಿಯೂ ದೈವಜ್ಞ ತಾಯಿಯ ಉದರದಲ್ಲಿ ಹುಟ್ಟಿದ್ದು ಹೌದಾದಲ್ಲಿ ಈ ಪತ್ರದ ಕನಿಷ್ಠ 10 ಪ್ರತಿಗಳನ್ನು ಜೆರಾಕ್ಸ್ ಮಾಡಿ ಹಂಚಿರಿ. ದೈವಜ್ಞ ಬ್ರಾಹ್ಮಣರ ಸ್ವಾಭಿಮಾನವನ್ನು ಜಾಗೃತಗೊಳಿಸಿರಿ.

ಪರಿವರ್ತನೆ ಜಗತ್ತಿನ ನಿಯಮ.

ಇತಿ

ಅಗ್ನಿ ದೈವಜ್ಞ

ಈ ಸಂದೇಶವನ್ನು ಓದಿ ನನ್ನಲ್ಲಿ ಸ್ವಾಭಿಮಾನವು ಜಾಗೃತಗೊಂಡು ಈ ಪ್ರತಿಯನ್ನು ನಿಮಗೆ ಕಳಿಸುತ್ತಿದ್ದೇನೆ. ನೀವು ಈ ಪತ್ರದ ಪ್ರತಿಗಳನ್ನು ದೈವಜ್ಞ ಸಮಾಜ ಬಾಂಧವರಿಗೆ ತಲುಪಿಸಿ.

"ಸತ್ಯ ದರ್ಶನ"

ವೇದಕಾಲೀನ - ಸೂರ್ಯವಂಶಿ, ಋಗ್ವೇದಿಗಳೂ, ಅಶ್ವಲಾಯನ ಸೂತ್ರ - ಯಾಕ್ ಶಾಖಲ ಶಾಖಾಧ್ಯಾಯಿ, ಸ್ಮಾರ್ಥ ಅದ್ವೈತಿಗಳೂ, ಶಿವ ಶಕ್ತಿ ಕುಲದೇವತಾರಾಧಕರೂ, ಪಂಚಾಯತನ ಪೂಜಾ ನಿರತ ಷಟ್ಕರ್ಮಿಗಳೂ ಆದ **ಗೌರವಾನ್ವಿತ ದೈವಜ್ಞ ಬ್ರಾಹ್ಮಣ ಸಮಾಜಕ್ಕೆ ಮಾಡುವ ಅಭಿಮಾನ ಪೂರ್ವಕ ವಿಚಾರಧಾರೆ.**

ಗಮನಿಸಿರಿ : ಇದರಲ್ಲಿ ಬರೆದಿರುವ ಪ್ರತೀಯೊಂದು ವಾಕ್ಯವನ್ನು ತುಲನೆಮಾಡಿ, ಅರ್ಥವಿಸಿಕೊಂಡು, ಕಿರಿಯರಿಗೆ ತಿಳಿಯಪಡಿಸಿ, ವಿವರಿಸಿ, ಸರಿಯಾಗಿ ಮನದಟ್ಟು ಮಾಡಿಸಿಕೊಡಿರಿ. ಇದು ನಿಮ್ಮ ಭಾವೀ ಜೀವನದಲ್ಲಿ ಹಾಗೂ ಮುಂದಿನ ಪೀಳಿಗೆಯವರಿಗೆ ಉತ್ತಮೋತ್ತಮ, ಮಾರ್ಗದರ್ಶಿಯಾಗಿರುತ್ತದೆ ಎಂದು ತಿಳಿಸಲಿಚ್ಛಿಸುತ್ತೇವೆ.

ನಮ್ಮ ಪರಂಪರೆಯ ಬಗ್ಗೆ ತಪ್ಪು ತಿಳುವಳಿಕೆಯನ್ನು ಕೊಡಲು ಪ್ರಯತ್ನಿಸುವ ತಪ್ತ ಮುದ್ರಾಧಾರಣೆ ಮಾರ್ಗಿನ ಪಂಗಡದವರ ಬಗ್ಗೆ ಎಚ್ಚರಿಸಲು ಹಾಗೂ ಎಚ್ಚರದಿಂದಿರಲು ಇದನ್ನು ಶಾಂತಚಿತ್ತರಾಗಿ ಓದಿ ತಿಳಿಯಿರಿ ಹಾಗೂ ಸಮಾಜ ಬಾಂಧವರಿಗೆ ತಿಳಿಯಪಡಿಸಲು ಜೆರಾಕ್ಸ್ ಮಾಡಿ ಹಂಚಿ ಮತ್ತು ಜೋಪಾನವಾಗಿಟುಕೊಳ್ಳಿರಿ.

ಈ ಲೇಖನಕ್ಕೆ ಆಧಾರ ಗ್ರಂಥಗಳು ಮತ್ತು ಸಾಹಿತ್ಯ

❖ **ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಸ್ಥಳ ಪುರಾಣ** : ಮಂಜೇಶ್ವರ ಗಣಪತಿ ರಾವ್ ಐಗಳ್, 1923. ❖ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ. ❖ **ಶಿವಳ್ಳಿ ಬ್ರಾಹ್ಮಣರು** ಸಂಪುಟ 1 ಮತ್ತು 2, ಪ್ರಕಾಶನ : ಶಿವಳ್ಳಿ ಪ್ರತಿಷ್ಠಾನ, ಮುಂಬೈ, 2001. ❖ **"ತುಳುನಾಡು" ಸಂಶೋಧನಾತ್ಮಕ ಗ್ರಂಥ** : ಡಾ|| ಪಿ. ಗುರುರಾಜ ಭಟ್, ಉಡುಪಿ, 1963. ❖ **ಶ್ರೀಮದ್ವಾಚಾರ್ಯರು, ಶ್ರೀ ವಾದಿರಾಜರು** : ಕೊರಟಿ ಶ್ರೀನಿವಾಸ ರಾವ್ ; ಬೆಂಗಳೂರು 1980. ❖ **ಧರ್ಮಸ್ಥಳ ಶ್ರೀ ಮಂಜುನಾಥ** ; ಪುತ್ತಿಗೆ ಸುಬ್ರಹ್ಮಣ್ಯ ಆಚಾರ್ಯ ; 1983. ❖ **ಕರ್ನಾಟಕ ಸಂಕ್ಷಿಪ್ತ ಇತಿಹಾಸ** ; ಡಾ|| ಸೂರ್ಯನಾಥ ಕಾಮತ್, 1973. ❖ **ಆಚಾರ್ಯ ಮಧ್ವ** ; ಬನ್ನಂಜೆ ಗೋವಿಂದಾಚಾರ್ಯ ; 1995. ❖ **'ದೈವಜ್ಞಸೌರಭ' ಮಾಸಪತ್ರಿಕೆ, ಮಂಗಳೂರು** : ಸಂಪಾದಕ : ಎಸ್. ಪ್ರಶಾಂತ ಶೇಟ್ ❖ **ತುಳು ಭಾಷೆ - ತುಳುನಾಡು ಮತ್ತು ತುಳುನಾಡವರ ಸಮಾಜ** ; ಬಿ. ಸಚ್ಚಿದಾನಂದ ಹೆಗ್ಡೆ ❖ **'ತರಂಗ' ವಾರಪತ್ರಿಕೆ, ಮಣಿಪಾಲ, ಸಂಪಾದಕ** : ಸಂತೋಷ ಕುಮಾರ್ ಗುಲ್ವಾಡಿ - 1985. ❖ **ಉಡುಪಿ ಕ್ಷೇತ್ರದ** ನೈಜ ಚಿತ್ರ ಮತ್ತು ಚಾರಿತ್ರಿಕ ಹಿನ್ನೆಲೆ ; 1969 ಮತ್ತು ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ ಅದರ ಸಂಶೋಧನಾತ್ಮಕ ಐತಿಹಾಸಿಕ ಹಿನ್ನೆಲೆ - 1970 - ಡಾ|| ಎಂ.ಎಸ್. ಅಚ್ಯುತ ಶರ್ಮಾ. ❖ **ದ.ಕ. ಜಿಲ್ಲಾ ಚರಿತ್ರೆ, ಪ್ರಾಚೀನ ತುಳುನಾಡು** - ಪೊಳಲಿ ಶೀನಪ್ಪ ಹೆಗ್ಗಡೆ -ಕ್ರಿ.ಶ. 1915-54. ❖ **ದಕ್ಷಿಣ ಭಾರತದ ಇತಿಹಾಸ** (ಪ್ರಾಚೀನ ಯುಗ)- ಮೂಲ : ಕೆ.ಕೆ. ಪಿಳ್ಳೈ, ಮದ್ರಾಸು. ❖ **ಸ್ಥಾನಿಕ ಬ್ರಾಹ್ಮಣರು** - ಐ. ಕೆ. ಶ್ರೀನಿವಾಸ ರಾವ್ - 1937. ❖ **ತೆಂಕನಾಡು** - ಸೆಡಿಯಾಪು ಕೃಷ್ಣ ಭಟ್ಟ - ಕಾಸರಗೋಡು - 1947. ❖ **ಕೂಟ ಮಹಾ ಜಗತ್ತು** - ಕೆ.ಎಸ್. ಕಾರಂತ - 1958. ❖ **ಶ್ರೀ ವಾದಿರಾಜ ಗುರು ಚರಿತ್ರೆ** - ಬಿ. ಶ್ರೀನಿವಾಸ ಭಟ್ಟ - ಕ್ರಿ.ಶ. 1874. ❖ **ಬ್ರಾಹ್ಮಣೋತ್ಪತ್ತಿ ಮಾರ್ತಾಂಡ** - ಹರಿಕೃಷ್ಣ ಶಾಸ್ತ್ರಿ - ಮುಂಬಯಿ 1830. ❖ **ರಜತ ಪೀಠ ಪುರ ಮಹಾತ್ಮ್ಯಂ**, ಪದ್ಮನಾಭ ಶಾಸ್ತ್ರಿ - 1913. ❖ **ಕನ್ನಡ ನಾಡಿನ ಚರಿತ್ರೆ - 2**, ಡಾ|| S.C. ನಂದೀಮಠ ❖ ಹಳೇಯ ಸಂಗ್ರಹಿತ 'ಉದಯವಾಣಿ', ಮುಂಗಾರು, ತರಂಗ, ಪ್ರಜಾಮತ, ವಿಜಯ ಕರ್ನಾಟಕ ಪತ್ರಿಕೆಗಳು. ❖ **ರಜತ ಮಹೋತ್ಸವ ಸಂಚಿಕೆ - 1960** ಮಂಗಳೂರು ದೈವಜ್ಞ ಬ್ರಾಹ್ಮಣರ ಸಂಘ (ರಿ.). ❖ **ಧರ್ಮ ಸಂರಕ್ಷಣೆ**, ಮಾಸ್ತಿ ವೆಂಕಟೇಶ ಐಯ್ಯಂಗಾರ್ - **1983.** ❖ **ಬ್ರಾಹ್ಮಣರು ಯಾರು?** - ಜಿಲ್ಲೇಳ್ಳ ವೀರಬ್ರಹ್ಮಾಚಾರ್ಯುಲು

"ಸತ್ಯ ದರ್ಶನ"

ಉಡುಪಿಯ ಶಿವಳ್ಳಿ ಮಧ್ವ ಬ್ರಾಹ್ಮಣ (?)ರ ಇತಿಹಾಸದ ಸತ್ಯಕಥೆ ನಾನು ಕೇಳಿದ್ದಕ್ಕಿಂತಲೂ ಇನ್ನೂ ವಿಭಿನ್ನವಾಗಿದೆ ಎಂದು ತಿಳಿದು ಅದನ್ನು ಭಿನ್ನವಾಗಿಯೇ ಬರೆದು ಮಾಧ್ವ ವೈಷ್ಣವರನ್ನು ಇಂದ್ರ-ಚಂದ್ರ-ಮಹಾಪುರುಷರೆಂದು ಹೊಗಳುವ ನಮ್ಮ ಸ್ವಂತ ದೈವಜ್ಞ ಬ್ರಾಹ್ಮಣ (ದೈ.ಬ್ರಾ) ಸಮಾಜದ ಪವಿತ್ರತೆ, ಹಿರಿಮೆಗಳ ಬಗ್ಗೆ ಅಭಿಮಾನವಿಲ್ಲದ ದೈ.ಬ್ರಾ.ರಿಗೆ ತಿಳಿಸಲು ಇದನ್ನು ಬರೆಯಬೇಕಾಯಿತು. ಶಿವಳ್ಳಿ, ಉಡುಪಿ ಮಧ್ವ ವೈಷ್ಣವರ ಜಾತಿಯನ್ನು ಮಾತ್ರ ಕೇಂದ್ರವಾಗಿರಿಸಿ ಇದನ್ನು ಬರೆಯಲಾಗಿದೆ. ಇದಕ್ಕೆ ಮೂಲ ಆಧಾರ ಹಿಂದಿನ ಹೆಸರಾಂತ ಇತಿಹಾಸಕಾರರ, ಪುರಾತತ್ವ ತಜ್ಞರ ಗ್ರಂಥಗಳೇ ಆಗಿವೆ. ಪ್ರತಿಯೊಂದಕ್ಕೂ ಆಧಾರವಿದೆ.

ಪರಶುರಾಮ ಸೃಷ್ಟಿ ತುಳುನಾಡಿನ ಶ್ರೀ ಭಟ್ಟಾಚಾರ್ಯರ "ಗ್ರಾಮಪದ್ಧತಿ" ಗ್ರಂಥವು ತುಳುನಾಡಿಗೆ ವಲಸೆ ಬಂದ ಬ್ರಾಹ್ಮಣರನ್ನು ಕುರಿತಾದ ಮಹತ್ವದ ದಾಖಲೆಯಾಗಿದೆ. ಬೇರೆಲ್ಲೂ ಸಿಗದ ಅಧಿಕೃತ ಮಹತ್ವದ ಮಾಹಿತಿಗಳು ಇದರಲ್ಲಿ ಸಿಗುತ್ತದೆ. ಮುಖ್ಯವಾಗಿ ತುಳು ಮೂಲದ ಬ್ರಾಹ್ಮಣರ ಬಗ್ಗೆ.

______ ಶಿವಳ್ಳಿ (ತುಳುವ) ಬ್ರಾಹ್ಮಣರು ಯಾರು? ಎಲ್ಲಿಂದ ಬಂದರು? ______

ಪರಶುರಾಮರು ಸಮುದ್ರರಾಜನಿಂದ ಭೂಭಾಗವನ್ನು ಪಡೆದು ಕೊಂಕಣ ಪ್ರದೇಶವನ್ನು ಸೃಷ್ಟಿ ಮಾಡಿದರು. ಕೆಲಕಾಲದ ನಂತರ ಇಲ್ಲಿ ತುಳುನಾಡಿನಲ್ಲಿ ಬ್ರಾಹ್ಮಣರಿಲ್ಲದ್ದನ್ನು ಕಂಡ ಇಲ್ಲಿನ ಮೊಗವೀರರು, ಕೈತರ್ವ, ರೇವ ಮುಂತಾದ ಮೀನು ಹಿಡಿಯುವ ಜಾತಿಯವರಿಗೆ ಅವರ ಬಲೆಯ ನೂಲನ್ನೇ ಜನಿವಾರವನ್ನಾಗಿ ಮಾಡಿ ಹಾಕಿ ಅವರನ್ನೂ ಬ್ರಾಹ್ಮಣರನ್ನಾಗಿ ಮಾಡಿದನೆಂದು 'ಪರಶುರಾಮ ಚರಿತ' ಗ್ರಂಥದಲ್ಲಿದೆ. 'ಕೇರಳೋತ್ಪತ್ತಿ ಶಾಸನ'ದಲ್ಲಿ - ಪರಶುರಾಮರು ಇಲ್ಲಿನ ನದಿ ಸಮುದ್ರ ತೀರದ ದ್ವೀಪದಲ್ಲಿ ವಾಸಿಸುತ್ತಿದ್ದ ಬೆಸ್ತರಿಗೆ ಜನಿವಾರ ಹಾಕಿ ಬ್ರಾಹ್ಮಣ ದೀಕ್ಷೆ ನೀಡಿ ತಾನು ಸೃಷ್ಟಿಸಿದ ಪ್ರದೇಶವನ್ನು ಈ ಮತ್ಸ್ಯ ಬ್ರಾಹ್ಮಣರಿಗೆ ದಾನಮಾಡಿದ್ದನೆಂದು ಉಲ್ಲೇಖವಿದೆ. (ಈ ವಿಷಯ ಬುಕನಾನ್ ಎಂಬ ವಿದ್ವಾಂಸ ಬರೆದಿರುವ A Journy from Madras to Mysore, Canara & Malbar) ಎನ್ನುವ ಕೃತಿಯಲ್ಲಿ ಬರೆದಿದ್ದಾನೆ. ನೂರಾರು ವರ್ಷಗಳ ನಂತರ ಈ ಬ್ರಾಹ್ಮಣರು ಕ್ರಮೇಣ ಕೇರಳಕ್ಕೆ ವಲಸೆ ಹೋದಮೇಲೆ ಕರಾವಳಿಯಲ್ಲಿ ಬ್ರಾಹ್ಮಣರ ಕೊರತೆ ಕಂಡು ಬರಲು ಸುಮಾರು 11ನೇ ಶತಮಾನದಲ್ಲಿ ತಾಳಗುಂದದ ತಾಮ್ರ ಶಾಸನ ಪ್ರಕಾರ ಮಾರ್ಕಂಡೇಯ ಮುನಿಯು ಮಯೂರವರ್ಮ ರಾಜನಿಗೆ ಆದೇಶ ನೀಡಿ ಉತ್ತರ ಪ್ರದೇಶದ ಅಹಿಚ್ಛತ್ರದಿಂದ 3200 ಬ್ರಾಹ್ಮಣರ ಗುಂಪನ್ನು ಕರೆತಂದು ಪರಶುರಾಮ ಕ್ಷೇತ್ರದಲ್ಲಿ ನೆಲಸುವಂತೇ ಮಾಡಿದನು ಎಂದು ಸ್ಟರೋಕ್ ಎಂಬ ಬ್ರಿಟಿಷ್ ಅಧಿಕಾರಿ ತನ್ನ "Madras District Manual South Canara"ದಲ್ಲಿ ದಾಖಲಿಸಿದ್ದಾನೆ.

ತುಳುನಾಡಿಗೆ ಬಂದ ಬ್ರಾಹ್ಮಣರು ಬಂಟರ, ಮೊಗೇರರ ಹೆಣ್ಣು ಮಕ್ಕಳನ್ನು ಮದುವೆಯಾದ್ದರಿಂದ ತುಳುವರು ಈ ಬ್ರಾಹ್ಮಣ ಹೆಂಗಸರನ್ನು ಮದಿಮಾಳ್ ಎಂದು ಪ್ರತ್ಯೇಕವಾಗಿ ಗುರುತಿಸುತ್ತಾರೆ. ಈ ತುಳು ಮಧ್ವ ವೈಷ್ಣವ ಬ್ರಾಹ್ಮಣರು "ನಾವು ಅಹಿಚ್ಛತ್ರದಿಂದ ಪತ್ನೀ ಪುತ್ರ ಸಮೇತ ಬಂದವರು" ಎಂದು ಯಾವುದೋ ಸಂಸ್ಕೃತ ಶ್ಲೋಕಗಳನ್ನು ಸ್ವರಚನೆ ಮಾಡಿ ಪುರಾಣಕಥೆಯೊಂದಿಗೆ ಹೊಂದಿಸಿ ತಾವು ಪರಿಶುದ್ಧ ಬ್ರಾಹ್ಮಣರು ಎಂದು ವಾದಿಸುತ್ತಾರೆ. - ಎಂದು L. Tursten ಎಂಬ ವೈಸರಾಯ್ ಅಧಿಕಾರಿ ತಮ್ಮ Casts & Tribes in South Indiaದಲ್ಲಿ ದಾಖಲಿಸಿದ್ದಾನೆ. ಒಟ್ಟಿನಲ್ಲಿ ಇವರ ಋಷಿ ಮೂಲ, ಸ್ತ್ರೀ ಮೂಲ, ಗೋತ್ರ ಮೂಲ ನಿಗೂಢವಾಗಿದೆ. ಏಕೆಂದರೆ ಈ ತುಳು ಮಾಧ್ವರಿಗೆ 'ಅಹಿಚ್ಛತ್ರ'ವೆಂಬುದು ಎಲ್ಲಿದೆ ಎಂದು ಇನ್ನೂ ಗೊತ್ತೇ ಇಲ್ಲ. ಇವರ ಮಾಧ್ವ ವಿದ್ವಾಂಸರು ಬರೆದ ಅನೇಕ ಸಂಶೋಧನಾ ಗ್ರಂಥಗಳಲ್ಲಿ ಅದು ಆಂಧ್ರದ ಗೋದಾವರಿ ತೀರದಲ್ಲಿದೆ. ಮಹಾರಾಷ್ಟ್ರದ ವಿದರ್ಭದಲ್ಲಿದೆ, ಇನ್ನೊಬ್ಬರು ಶಿವಮೊಗ್ಗದ ಸ್ಥಾನಗುಂದವೇ ಅಹಿಚ್ಛತ್ರವೆಂದವರಿದ್ದಾರೆ. / ಗೋಕರ್ಣ / ಅದು ಅಲ್ಲದಿದ್ದರೆ ಕಾಶೀ ಘಾಟ್ ಪ್ರಯಾಗವೇ ನಮ್ಮ ಮೂಲ ಎಂದು ದಾಖಲಿಸಿದ್ದಾರೆ. ಡಾ|| ಗುರುರಾಜ ಭಟ್ಟರು 'ತುಳು ನಾಡು' ಕೃತಿಯಲ್ಲಿ ಇದ್ಯಾವುದೂ ಅಲ್ಲ ಎಂದು ನಿರಾಕರಿಸುತ್ತಾರೆ.

ದೈವಜ್ಞ ಬ್ರಾಹ್ಮಣ ಸಮಾಜದವರಿಗೆ ಹಯಗ್ರೀವನೇ ಕುಲದೇವರು ಎಂದು ಆದೇಶಿಸುವ ಈ ಶಿವಳ್ಳಿ ವೈಷ್ಣವ ಮಾಧ್ವರಿಗೆ ತಮ್ಮ ಜಾತಿಯ, ಮನೆತನದ ಮೂಲ ಕುಲದೇವರು ಯಾವುದು? ಎಂದು ಇನ್ನೂ ತಿಳಿದಿಲ್ಲ. ಈ ಮಂಡೆ ಬಿಸಿ ಬೇಡವೆಂದು 50% ಜನ ಮಧ್ವರು ಉಡುಪಿ ಶ್ರೀ ಕೃಷ್ಣನನ್ನೇ ಕುಲದೇವರನ್ನಾಗಿ ಸ್ವೀಕರಿಸಿದ್ದಾರೆ. 30% ಜನ ಗೌಪ್ಯವಾಗಿ ಮನೆಯೊಳಗೆ ಶಿವ ಚಂದ್ರಮೌಳೀಶ್ವರನನ್ನೇ ಆರಾಧಿಸುತ್ತಾರೆ. ಉಳಿದ ಇಪ್ಪತ್ತರು ಕುಲದೇವರನ್ನು ಹುಡುಕುವ, ತಿಳಿದುಕೊಳ್ಳುವ ಗಡಿಬಿಡಿಯಲ್ಲಿದ್ದಾರೆ. ಇವರ ಶುಭ ಕಾರ್ಯದಲ್ಲಿ ಸಂಕಲ್ಪ ಮಂತ್ರ - ಆಮಂತ್ರಣದಲ್ಲಿ ಕುಲದೇವರ ಹೆಸರೇ ಇರುವುದಿಲ್ಲ. ಬೇಕಾದರೆ ಕೇಳಿ ನೋಡಿ!!

ಉಡುಪಿಯ ನೈಜ ಚರಿತ್ರೆ... ಚಾರಿತ್ರಿಕ ಹಿನ್ನೆಲೆ ಏನು ಗೊತ್ತೇ??

ಈ ಶಿವಳ್ಳಿ ವೈಷ್ಣವ ಬ್ರಾಹ್ಮಣರು ಕೈಲಾಸ ಅಧಿಪತಿ ಶಿವನ ಕಡುದ್ವೇಷಿಗಳು. ವಿಷ್ಣು ಮಾತ್ರ ಸರ್ವ ಶ್ರೇಷ್ಠ, ಸರ್ವೋತ್ತಮ ದೇವರು ಎಂದು ನಂಬುತ್ತಾರೆ. 12ನೇ ಶತಮಾನದಿಂದಲೂ ಊರಲ್ಲಿರುವ ಅನೇಕ ಶಿವ-ಶಕ್ತಿ ದೇವರ ದೇವಾಲಯಗಳನ್ನು ವೈಷ್ಣವ ದೇವಾಲಯವಾಗಿ, ಪರಿವರ್ತಿಸಿ, ಶೈವ+ ಸ್ಮಾರ್ತರನ್ನು ತಪ್ತ ಮುದ್ರಾಧಾರಣೆ ಮಾಡಿ ವೈಷ್ಣವರನ್ನಾಗಿ ಮತಾಂತರಿಸಿದ್ದರು.

ಉಡುಪಿಯ ಉದ್ದನಾಮ ಪರಂಪರೆಗೆ ಸೇರಿದ ಇವರು ಇಂದಿಗೂ ಈಶ್ವರ ದೇವರ ದೇವಸ್ಥಾನದ ತೀರ್ಥ, ಪ್ರಸಾದವನ್ನು ಸ್ವೀಕರಿಸದಷ್ಟು ಕಟು ವೈಷ್ಣವರಾಗಿದ್ದಾರೆ. ಉತ್ತರ ಭಾರತದ ಬದ್ರಿನಾಥ್‌ಗೆ ಹೋದರೂ, ಕೇದಾರನಾಥದ ಶಿವ ದೇವಾಲಯಕ್ಕೆ ಕಾಲಿಡುವುದಿಲ್ಲ. ಬದರಿಯಲ್ಲಿನ ವಿಷ್ಣು ಪ್ರತಿಮೆ ಪ್ರತಿಷ್ಠಾಪಿಸಿದ್ದು ಸ್ಮಾರ್ತರಾಗಿದ್ದ ಎಂದೂ ಹರಿ-ಹರ ಎಂದು ಭೇದ ಮಾಡದ ಶ್ರೀ ಆದಿ ಶಂಕರಾಚಾರ್ಯರು ಎಂದು ಇವರಿಗೆ ಗೊತ್ತಿಲ್ಲವೇ? ಉಡುಪಿ, ಕುಂದಾಪುರ, ಮಂಗಳೂರು ಪರಿಸರದಲ್ಲಿನ ಅನೇಕ ಶಿವ ಶಕ್ತಿ ದೇವಸ್ಥಾನಗಳನ್ನು ಆಕ್ರಮಿಸಿ ಶಿವಲಿಂಗದ ನೆತ್ತಿ ಮೇಲೆ ಮತ್ತು ಬುಡದಲ್ಲಿ ವಿಷ್ಣು ಸಾಲಿಗ್ರಾಮ ಇಟ್ಟು, ವೇದೋಕ್ತ ಶೈವಾಗಮದ ಪೂಜಾ ನಿಯಮ ಗೊತ್ತಿಲ್ಲದಿದ್ದರೂ ಜನರೆದುರು ಅದಕ್ಕೆ ಪೂಜೆ, ಧೂಪ ದೀಪ ನೈವೇದ್ಯ ಇಟ್ಟು ವಿಷ್ಣುವಿಗೆ ಸಮರ್ಪಿಸಿ ತಾವು ಶಿವಲಿಂಗಕ್ಕೇ ಪೂಜೆ ಮಾಡಿದವರಂತೇ ನಟಿಸುತ್ತಾರೆ. ಈ ಪಾಪಿಗಳಿಂದ ಪರಿವರ್ತಿಸಲ್ಪಟ್ಟ ದೇವಾಲಯಗಳೆಂದರೆ. ಉಡುಪಿಯ ಅನಂತೇಶ್ವರ, ಚಂದ್ರಮೌಳೀಶ್ವರ ಹಾಗೂ ಎಂಟು ದಿಕ್ಕಿನಲ್ಲಿರುವ ದೇವಿ ದೇವಾಲಯಗಳು, ವಡಭಾಂಡೇಶ್ವರ, ನಿಟ್ಟೂರು ಸೋಮನಾಥೇಶ್ವರ, ಧರ್ಮಸ್ಥಳ, ಮಂಗಳೂರಿನ ಕದ್ರಿ, ಕಟೀಲು, ನೆಲ್ಲಿತೀರ್ಥ, ಶರವು ಶರಭೇಶ್ವರ, ತ್ರಿಶಿಲೇಶ್ವರ, ಉಳ್ಳಾಲದ ಸೋಮೇಶ್ವರ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಇತ್ಯಾದಿ..... ಇತ್ಯಾದಿ.

ಈ ಮಧ್ವರು ದೈ.ಬ್ರಾ.ರು, ಜಿ.ಎಸ್.ಬಿ., ಸಾರಸ್ವತರ ಕುಲದೇವರಾದ ಶಿವನನ್ನು ವಿಷ್ಣುವಿನ ಅಡಿಯಾಳು ದೇವತೆ ಎಂದು ಅವಮಾನಿಸುತ್ತಾರೆ. (O.P. No. 105ರ 1949ರ ತೀರ್ಪಿನ ಮೇಲೆ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಕಮಿಷನರು ಧರ್ಮಸ್ಥಳ ಹೆಗ್ಗಡೆಯ ಮೇಲೆ ಮಂಜುನಾಥೇಶ್ವರ ದೇವಾಲಯದ ವಿಚಾರದಲ್ಲಿ ಬೆಂಗಳೂರು ಹೈಕೋರ್ಟಿನಲ್ಲಿ ಮಾಡಿದ ಅಪಿಲ್ R.A. No. 165-1957ರ ಮೇಲೆ ತಾ. 30-8-1968ರಲ್ಲಿ ಕೊಟ್ಟ ತೀರ್ಪಿನಲ್ಲಿ R.W. ಹನ್ನೊಂದನೇ ಸಾಕ್ಷಿದಾರ **ಉಡುಪಿ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಸ್ವಾಮಿಗಳು "ರುದ್ರನಾದ ಶಿವನನ್ನು ದೇವೋತ್ತಮ ವಿಷ್ಣುವಿನಿಂದ ಕೆಳಗೆ 7ನೇ ಮತ್ತು 8ನೇ ಸ್ಥಾನಗಳನ್ನು ಹೊಂದಿದ ಗರುಡ ಮತ್ತು ಶೇಷರಿಗಿಂತ ಕೆಳಗಿನ 9ನೇ ಸ್ಥಾನವನ್ನು ಹೊಂದಿದ ವಿಷ್ಣುವಿನ ದಾಸ ಯಾ ಕೆಲಸದವನ** (Dasa or Subordinate diety of Vishnu) **ಸ್ಥಾನದಲ್ಲಿಟ್ಟು ವೈಷ್ಣವರು ಪೂಜಿಸುತ್ತಾರೆ"** ಎಂದು ಹೇಳಿಕೆ **ಕೊಟ್ಟಿರುತ್ತಾರೆ.**

ಇವರು ಮತಾಂತರಿಸಿದ ಶಿವಸಂಬಂದಿ ದೇವಸ್ಥಾನಗಳಲ್ಲಿ ಶಿವನಿಗೆ ಪ್ರಿಯವಾದ ಬಿಲ್ವಪತ್ರೆ, ವಿಭೂತಿ ಬದಲಿಗೆ ತುಳಸಿದಳ, ಗಂಧವನ್ನು ಉಪಯೋಗಿಸುತ್ತಾರೆ. ಶಿವಾಲಯದ ಎದುರು ಕಂಬದಲ್ಲಿ ನಂದೀ ಧ್ವಜ ಏರಿಸುವ ಬದಲು ಗರುಡಧ್ವಜ ಏರಿಸುತ್ತಾರೆ. ಶಿವಲಿಂಗಕ್ಕೆ ಅಭಿಷೇಕವಾದ ನೀರನ್ನು ಭಕ್ತಾದಿಗಳಿಂದ ದಾಟಿಸುತ್ತಾರೆ. ಇಲ್ಲಿ ನಡೆಯುವ ವಿಧಿ ವಿಧಾನಗಳು ಶೈವಾಗಮ ಪದ್ಧತಿಗೆ ವಿರುದ್ಧವಾಗಿದೆ. ಮೇಲೆ ಹೇಳಿದ ದೇವಸ್ಥಾನಗಳೆಲ್ಲವೂ, ಪೂಜೆ ಆಡಳಿತಗಳೆಲ್ಲವೂ ಶೃಂಗೇರಿ ಮಠದ ಶಿಷ್ಯರಾದ ಸ್ಥಾನಿಕ ಶಿವ ಬ್ರಾಹ್ಮಣರ ವಶದಲ್ಲಿತ್ತು.. ವಾದಿರಾಜರ ಕಾಲದಲ್ಲಿ ಮತ್ತು ಮೈಸೂರಿನ ದಿವಾನ ಪೂರ್ಣಯ್ಯನವರ ಕಾಲದಲ್ಲಿ ಎಲ್ಲವೂ ಮಧ್ವರ ಕೈವಶವಾಯಿತು.

ಉಡುಪಿಯಲ್ಲಿ ಈಗ ಇರುವ ಶ್ರೀಕೃಷ್ಣ ಮಠದ ಪರಿಸರದ 3 ಎಕರೆ ಜಾಗವು ಶ್ರೀಮದ್ ಅನಂತೇಶ್ವರ ದೇವಳದಿಂದ ಮೂಲಗೇಣಿಗೆ ಪಡೆದುಕೊಂಡದ್ದಾಗಿದೆ. ಶ್ರೀ ಅನಂತೇಶ್ವರ ದೇವರ ಉತ್ಸವ ಕಾಲದಲ್ಲಿ ಶ್ರೀ ಕೃಷ್ಣ ಮಠದಿಂದ [ದೇವಾಲಯವಲ್ಲ.] ಗೇಣಿ ಪಾವತಿ ಮಾಡುವ ಕ್ರಮ ಈಗಲೂ ಇದೆ. 8ನೇ ಶತಮಾನದಲ್ಲಿ ಶ್ರೀ ಚಂದ್ರ ಮೌಳೀಶ್ವರ ದೇವರನ್ನು ಜಗದ್ಗುರು ಶ್ರೀ ಆದಿಶಂಕರಾಚಾರ್ಯರು ಪೂಜಿಸಿದ್ದರು ಎಂದು ಸ್ಥಳೀಯ ದಾಖಲೆಗಳಿಂದ ತಿಳಿದು ಬರುತ್ತದೆ. ಈಗ ಅದಮಾರು ಮಠವಿದ್ದ ಜಾಗದಲ್ಲಿ ಹಿಂದೆ ಶೃಂಗೇರಿ ಶಾಖಾ ಮಠವಿತ್ತು ಎಂದು ಶೃಂಗೇರಿ ಮಠದ ದಾಖಲೆಯಲ್ಲಿ ಸ್ಪಷ್ಟವಿದೆ. (ಆಧಾರ ಗ್ರಂಥ : ಉಡುಪಿ ಕ್ಷೇತ್ರ ನೈಜ ಚರಿತ್ರೆ : ಅಚ್ಯುತ ಶರ್ಮಾ : 1963)

ಶ್ರೀ ಕೃಷ್ಣ ಮಠದ ಗರ್ಭಗುಡಿಯೊಳಗೆ ಈಗಿನ ಶ್ರೀ ಕಡೆಗೋಲು ಕೃಷ್ಣಮೂರ್ತಿ ಮಾತ್ರವಲ್ಲ, ಇನ್ನೊಂದು ವೇಣುಗೋಪಾಲ್‌ನ ಮೂರ್ತಿಯೊಂದು ಪ್ರಧಾನ ಮೂರ್ತಿಯ ಹಿಂಬದಿ ಇದೆ. ಇದನ್ನು ಶಂಕರಾಚಾರ್ಯರ ಮುಖ್ಯ ಶಿಷ್ಯ ಶ್ರೀ ಹಸ್ತಾಮಲಕರಿಂದ ಪ್ರತಿಷ್ಠಾಪಿಸಲ್ಪಟ್ಟಿದೆ ಎಂದು ಆನಂದ ಗಿರಿಯ "ಶ್ರೀ ಶಂಕರ ವಿಜಯ" ಎಂಬ ಪುರಾತನ ಗ್ರಂಥದಲ್ಲಿ ಉಲ್ಲೇಖವಿದೆ. ಅದರ ಮೇಲೆ ಬಟ್ಟೆ ಮುಚ್ಚಿ ಇಡಲಾಗಿದೆ. ಈಗಲೂ ಅದನ್ನು ಗರ್ಭಗುಡಿಯಲ್ಲಿ ಬೆಳಕಿದ್ದಾಗ ಗಮನಿಸಬಹುದು. ಈ ವೇಣು ಗೋಪಾಲ ಮೂರ್ತಿಯನ್ನು ಗರ್ಭಗುಡಿಯಿಂದ ಸ್ಥಾನಪಲ್ಲಟಗೊಳಿಸಿದಾಗ ಪರ್ಯಾಯ ಮಧ್ವ ಸ್ವಾಮಿಗಳಿಗೆ ಅನೇಕ ಉಪದ್ರವಗಳು ಕಂಡು ಬಂದದ್ದರಿಂದ ಪುನಃ ಅಲ್ಲೇ ಇಡಲಾಯಿತು. ಈ ಪ್ರತಿಮೆ ಮೇಲೆ ಯಾವಾಗಲೂ ದೀಪದ ಎಣ್ಣೆ ಬೀಳುತ್ತಿದ್ದುದರಿಂದ "ತೈಲಕೃಷ್ಣ" ಎಂದೇ ಸ್ಮಾರ್ಥ ಸ್ಥಾನಿಕ ಬ್ರಾಹ್ಮಣರು ಕರೆಯುತ್ತಾರೆ. ವರ್ಷಕ್ಕೊಮ್ಮೆ ಆಷಾಢ ಶುದ್ಧ ನವಮಿಯಂದು ಉದ್ವರ್ತನಕ್ಕಾಗಿ ಅದನ್ನು ಹೊರಗೆ ತಂದು ತೊಳೆಯುತ್ತಾರೆ. ನಂತರ ಅದೇ ಮೂಲೆಯಲ್ಲಿ ಇರಿಸುತ್ತಾರೆ. ಚರಿತ್ರೆ ಇತಿಹಾಸದ ಪ್ರಕಾರ ಉಡುಪಿಯಲ್ಲಿ ಮೊತ್ತಮೊದಲು ವೈಷ್ಣವ ಬೀಜ ಬಿತ್ತಿದವರು 8ನೇ ಶತಮಾನದ ಶ್ರೀ ಶಂಕರಾಚಾರ್ಯರ ಶಿಷ್ಯ ಹಸ್ತಾಮಲಕಾಚಾರ್ಯರು.

(ಆಧಾರ : ಶಿವಳ್ಳಿ ಬ್ರಾಹ್ಮಣರು, ಪ್ರಬಂಧ ಸಂಕಲನ, ಭಾಗ-1, ಪುಟ : 259)

______ ಶಿವಳ್ಳಿ ಮಧ್ವವೈಷ್ಣವರಿಗೆ 'ಸಂಧ್ಯಾವಂದನೆ' ಮಾಡುವ ಹಕ್ಕಿಲ್ಲ! : ಕೋರ್ಟು ತೀರ್ಪು ______

1932ನೇ ಇಸವಿಯಲ್ಲಿ ಆಂಧ್ರ ಬ್ರಾಹ್ಮಣನಾದ ಸುಬ್ರಾಯ ಶರ್ಮಾ ಎಂಬವರು ಉಡುಪಿ ಪರಿಸರದಲ್ಲಿ ಬಹಿರಂಗವಾಗಿ ಎಲ್ಲರಿಗೂ ಕೇಳಿಸುವಂತೆ District Manual ದಾಖಲೆಯ ಆಧಾರದಿಂದ **"ಶಿವಳ್ಳಿ ಬ್ರಾಹ್ಮಣರು ಮೂಲತಃ ಆದಿಯಲ್ಲಿ ಮೀನು ಹಿಡಿಯುವ, ತಿನ್ನುವ ಮೊಗವೀರರಾಗಿದ್ದರೆಂದು,** ಪ್ರಚಾರ ಭಾಷಣ ಮಾಡುತ್ತಿದ್ದನು. ಈತನ ಹೇಳಿಕೆಯನ್ನು ಆಧಾರಪೂರ್ವಕವಾಗಿ ಖಂಡಿಸುವ ಬದಲು ಈ ಮಧ್ವರು ಮಂಗಳೂರಿನಿಂದ ಪುಂಡರನ್ನು ತರಿಸಿ ಆತನ ಮೇಲೆ ದೌರ್ಜನ್ಯ ನಡೆಸಿದ್ದರು. ಇದ್ಯಾವುದಕ್ಕೂ ಆತ ಬಗ್ಗದಿದ್ದಾಗ ಕಡೆಗೆ ಸೋದೆ ಮಠದ ಸ್ವಾಮಿಗಳು ತಮ್ಮ ಏಜೆಂಟರ ಮೂಲಕ ಸುಬ್ರಾಯ ಶರ್ಮನು ಉಡುಪಿಯೊಳಗೆ ಪ್ರಚಾರ ಮಾಡದಂತೆ ಸ್ಟೇಶನರಿ ಸಬ್‌ಮೆಜಿಸ್ಟ್ರೇಟದಲ್ಲಿ 2/32/13-5-1932ರ ನಂಬರಿಗೆ ದಾಕಲು ಪಿರ್ಯಾದು ಮಾಡಿ ತಡೆಯಾಜ್ಞೆ ತಂದರು. ಆ ಛಲವಾದಿ ಸುಬ್ರಾಯ ಶರ್ಮನು ಕುಂದಾಪುರ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ Mis. Case 20/32/20-5-1932ರಲ್ಲಿ ಅಪೀಲು ಮಾಡಿ ಸದ್ರಿ ತಡೆಯಾಜ್ಞೆಯನ್ನು ರದ್ದು ಮಾಡಿಸಿದನು. ಈ ತೀರ್ಪಿನಲ್ಲಿ ಶರ್ಮಾನ ವಾದ ಸರಿಯೆಂದೂ... **ಈ ಮಾಧ್ವರಿಗೆ ಸಂಧ್ಯಾವಂದನೆ ಇಲ್ಲವೆಂದೂ, ಅಲ್ಲದೇ ಸಂಧ್ಯಾವಂದನೆ ಅಂದರೆ ಏನೆಂಬುದು ಅಷ್ಟಮಠಗಳ ಸ್ವಾಮಿಗಳಿಗೂ ಗೊತ್ತಿಲ್ಲವೆಂದೂ ಆದುದ್ದರಿಂದ ಇವರು ಬ್ರಾಹ್ಮಣರೇ ಅಲ್ಲ"ವೆಂದೂ ತೀರ್ಪು** ನೀಡಿ "ಮಾಧ್ವರು" ತಾವು ಉತ್ತಮ ಪರಿಶುದ್ಧ ಬ್ರಾಹ್ಮಣರೆಂದು ವಿಷದ ಪಡಿಸುವ ಆಧಾರಗಳು ಯಾವುದೂ ಮಾಧ್ವವೈಷ್ಣವರಲ್ಲಿ ಇಲ್ಲವಾದ್ದರಿಂದ ಸುಬ್ರಾಯ ಶರ್ಮಾನ ವಿಚಾರದಲ್ಲಿ ಸತ್ಯಾಂಶವಿದೆ" ಎಂದು ತಿಳಿಸಿ ಅವನಿಗೆ ಯಾವುದೇ ಆತಂಕವಿಲ್ಲದೇ ಪ್ರಚಾರ ಮಾಡುವಂತೇ ಆದೇಶ ನೀಡಿ. ಸೋದೆ ವಾದಿರಾಜ ಮಠದವರಿಗೆ ಎಚ್ಚರಿಕೆ ನೀಡಿತ್ತು.

[ನ್ಯಾಯಮೂರ್ತಿ : N. S. ಅರುಣಾಚಲಂ Joint Magistrate, Kundapur - 1932]

______ ಶಿವಳ್ಳಿ ಮಧ್ವ ಬ್ರಾಹ್ಮಣರ ವಿವಾಹದಲ್ಲಿ ಮೀನು ಹಿಡಿಯುವ ಆಚರಣೆ : ______

ಶಿವಳ್ಳಿ ಪ್ರಕಾಶನ, ಮುಂಬೈ - ಇವರು 2001ರಲ್ಲಿ ಪ್ರಕಟಿಸಿದ "ಶಿವಳ್ಳಿ ಬ್ರಾಹ್ಮಣರು" ಪ್ರಬಂಧ ಸಂಕಲನದ ಪುಟ 19ರಲ್ಲಿ ಈ ರೀತಿ ಇದೆ." ಶಿವಳ್ಳಿ ಮಾಧ್ವ ವೈಷ್ಣವರಲ್ಲಿ ವಿವಾಹದ ಮರುದಿನ "ಚಾಪೆ ಮದುವೆ"ಯ ಸಂಪ್ರದಾಯವಿದೆ. ಅದು ಮುಖ್ಯವಾಗಿರುವುದು ಸುಮಂಗಲೆಯರ ಸಹಭಾಗಿತ್ವದಲ್ಲಿ ವಧೂವರರು ಒಟ್ಟಾಗಿ **ಚಾಪೆಯಲ್ಲಿ ಅಥವಾ ಬಟ್ಟೆಯಲ್ಲಿ ಮೀನು ಹಿಡಿಯುವ ನಟನೆ.** ಇದನ್ನು ಹಿರಿಯರು ಶಿವಳ್ಳಿ ಮಾಧ್ವ ಬ್ರಾಹ್ಮಣ ಸ್ತ್ರೀಯರು **ಮೂಲತಃ ಮೀನು ಹಿಡಿಯುವ ಮೊಗವೀರ ಸಮಾಜದವರಾಗಿದ್ದು,** ಅದರ ಸಂಕೇತವಾಗಿ, ಕನಿಷ್ಠ ಒಂದು ದಿನ ಸ್ತ್ರೀಯರು ತಮ್ಮ ಜಾತಿವೃತ್ತಿಯ ಅಧಿಕಾರವನ್ನು ಪ್ರದರ್ಶಿಸುವ ಅರ್ಥವನ್ನು ಸೂಚಿಸುತ್ತದೆ" ಎಂದು ವಿಶ್ಲೇಷಿಸುತ್ತಾರೆ.

"ಮರಣೋತ್ತರ ಸಂಸ್ಕಾರದಲ್ಲಿ ವಾರ್ಷಿಕ ಶ್ರಾದ್ಧದಲ್ಲಿ ಬ್ರಾಹ್ಮಣರನ್ನು ವಿಶ್ವೇದೇವರುಗಳು ಮತ್ತು ಪಿತೃಸ್ಥಾನದಲ್ಲಿ ಕುಳ್ಳಿರಿಸಿ ಊಟ ಬಡಿಸುವ ಸಂಪ್ರದಾಯವಿಲ್ಲ. ಪರ್ವಕಾಲದಲ್ಲಿ ಪಿತೃಗಳಿಗೆ, ದೇವತೆಗಳಿಗೆ ತಿಲಜಲತರ್ಪಣ ನೀಡುವ ಪದ್ಧತಿ ಮಾಯವಾಗಿದೆ. ಆಧುನಿಕ ಹಿರಿಯರು ವಾರ್ಷಿಕ ಶ್ರಾದ್ಧವನ್ನೂ, ಅನೇಕ ಮಾಧ್ವರು ಬಹುಸಂಖ್ಯೆಯಲ್ಲಿ ಯಜ್ಞೋಪವೀತಧಾರಣೆಯನ್ನೂ ವಿಸರ್ಜಿಸಿರುವರು. (ಪುಟ 20ರಲ್ಲಿದೆ)

ಮಾಧ್ವರಲ್ಲಿ ಶ್ರೀಕೃಷ್ಣಾಷ್ಟಮಿ ಗೊಂದಲ :

ಭಾರತಾದ್ಯಂತ ಗೋಕುಲಾಷ್ಟಮಿಯನ್ನು ಶ್ರಾವಣ ಮಾಸದ ಬಹುಳ ಅಷ್ಟಮಿ ದಿನ ಆಚರಿಸುತ್ತಿರುವಾಗ ಉಡುಪಿಯಲ್ಲಿ ಮಾತ್ರ ಮಾಧ್ವರು ಕರ್ಕಾಟಕ ವರ್ಜ್ಯವೆಂದು ಕೆಲವು ಸಲ ಮಹಾಲಯ ಪಿತೃಪಕ್ಷದಲ್ಲಿ ಆಚರಿಸುವುದು ತಮಾಶೆಯಾಗಿದೆ. ಉಡುಪಿ ಮಾಧ್ವರು ತಾವು ಸೌರರು, ಪರಿಶುದ್ಧ ಬ್ರಾಹ್ಮಣರೆಂದು ಹೇಳಿಕೊಂಡು ಧರ್ಮಸಮ್ಮತವಲ್ಲದ ಪಿತೃಗಳಿಗೆ ಪಿಂಡ ತಿಲೋದಕಗಳನ್ನು ಕೊಡುವ ಪಕ್ಷದಲ್ಲಿ ಗೋಕುಲಾಷ್ಟಮಿ ವ್ರತ ಹೇಗೆ ಆಚರಿಸುತ್ತಾರೋ?

ದೇಶವ್ಯಾಪಿ ಆಚರಿಸುವಂತೇ ಅಷ್ಟಮೀ ತಿಥಿಯನ್ನು - ರೋಹಿಣಿ ನಕ್ಷತ್ರವನ್ನು ಅನುಸರಿಸಿ ಮಾಡುವುದು ವೇದ ಸಮ್ಮತ. ಯಾವುದೇ ವ್ರತ ತಿಥಿಗಳು ಚಾಂದ್ರಮಾನವನ್ನೂ ಅನುಸರಿಸಿಯೇ ಇದೆ. ಹಿಂದೂ ವಾದವನು ಚಾಂದ್ರಮಾನ, ಸೌರಮಾನವ್ರತಗಳನ್ನೂ ಆಚರಿಸಬೇಕು. ಉಡುಪಿ ಮಧ್ವರ ಪಂಚಾಂಗವನ್ನು ಅನುಸರಿಸಿದರೆ ಸನಾತನ ಶಾಸ್ತ್ರಗಳಿಗೆ ಅಪಚಾರವೆಸಗಿದಂತಾಗುತ್ತದೆ. (ಏಕಾದಶಿಯ ದಿವಸ ಊಟ ಮಾಡಬೇಕೆ? ಹಾಗಿದ್ದರೆ ಉಡುಪಿಯ ಮಠಗಳಿಗೆ ಹೋಗಬೇಕು. ಒಂದು ಮಠಕ್ಕೆ ಏಕಾದಶಿಯಾದ ದಿವಸ ಇನ್ನೊಂದು ಮಠಕ್ಕೆ ದ್ವಾದಶಿಯಾಗಿರುತ್ತದೆ.)

ದೈವಜ್ಞ ಬ್ರಾಹ್ಮಣರು ಋಗ್ವೇದಿಗಳು, ಸಪ್ತಋಷಿ ಗೋತ್ರದವರು, ಶಿವ-ಶಕ್ತಿ ದೇವರುಗಳು ನಮ್ಮ ಕುಲದೇವರು. ಉಡುಪಿ ಮಾಧ್ವ ವೈಷ್ಣವರು ತಾವು ಯಜುರ್ವೇದಿಗಳೆಂದು ಕರೆಸಿಕೊಂಡರೂ ಅವರ ನಡವಳಿಕೆ, ವಿಧಿ ವಿಧಾನಗಳೆಲ್ಲವೂ ಅಥರ್ವಣ!! ಅವರಿಗೆ ನೂರಾರು ಗೋತ್ರಗಳು, ಪ್ರವರಗಳು. ಮಾಧ್ವರಿಗೆ ಅಧಿಕೃತವಾದ ಕುಲದೇವರುಗಳೇ ಇಲ್ಲ, ಶಾಸ್ತ್ರ ಪ್ರಕಾರ ಸಂಧ್ಯಾವಂದನೆ, ಗಾಯತ್ರಿ ಮಂತ್ರದ ಹಕ್ಕೇ ಇಲ್ಲ. ದೈ.ಬ್ರಾ.ರದ್ದು ಸರ್ವಸಮ್ಮತವಾದ ಚಾಂದ್ರಮಾನ ಪದ್ಧತಿ, ಚಾಂದ್ರಮಾನ ಯುಗಾದಿ, ಮಧ್ವ ವೈಷ್ಣವರ ಭಾಷೆ ತುಳು. ದೈವಜ್ಞರದ್ದು ದೇವಭಾಷೆ ಸಂಸ್ಕೃತದಿಂದ ವಿಕಾಸಗೊಂಡ ಕೊಂಕಣಿ ಭಾಷೆ! ನಿಜವಾಗಿಯೂ ಮಾಧ್ವ ವೈಷ್ಣವರು ನಮಗೆ ಅನ್ಯಪಂಗಡದವರಾಗಿದ್ದಾರೆ. ಈಗಲೂ ಕೆಲವು ಸೋದೆ ವಾದಿರಾಜ ಮಠದ ಅಭಿ(ಮಾಣಿ) ಮಾನಿ ಮುಖ್ಯ ಶಿಷ್ಯರಾಗಿರುವವರು ಮಾಧ್ವರ ಸೌರಮಾನ ಯಜುರ್ವೇದ - ತುಳು ಪದ್ಧತಿಯನ್ನು ಪಾಲಿಸುತ್ತಾರೆಯೇ? ಇಲ್ಲವಲ್ಲ? So..... ನಮ್ಮ ಶ್ರೇಷ್ಠ-ವೈದಿಕ-ಆರ್ಯ ದೈವಜ್ಞ ಬ್ರಾಹ್ಮಣ ಪರಂಪರೆಯನ್ನೇ ಪಾಲಿಸೋಣ-ಉಳಿಸೋಣ-ಬೆಳೆಸೋಣ ಅಲ್ಲವೇ? ಸ್ವಂತ ತಾಯಿಯೇ ನಮಗೆ ಶ್ರೇಷ್ಠ.

ದೈವಜ್ಞ ಬ್ರಾಹ್ಮಣರು ಜನಕ ಮಹಾರಾಜ, ಜನಮೇಜಯರಂಥ ಮಹಾರಾಜರಿಗೆ, ಶ್ರೀರಾಮಚಂದ್ರ, ಶ್ರೀಕೃಷ್ಣ ಮುಂತಾದ ದೇವತಾ ಮಹಿಮರಿಗೆ ಗುರುಗಳಾಗಿದ್ದ ಪೂಜ್ಯನೀಯ ವಸಿಷ್ಠ, ಕೌಶಿಕ, ಭಾರದ್ವಾಜ, ಅತ್ರಿ ಮುಂತಾದ ಸಪ್ತ ಋಷಿಗಳ ಗೋತ್ರದವರು. ದೈವಜ್ಞರದ್ದು ಸನಾತನ ವೈದಿಕ ಪರಂಪರೆ. ಉಡುಪಿ ಮಧ್ವರದ್ದು ಇತ್ತೀಚಿನ ಅಂದರೆ ಕೇವಲ ಎಂಟುನೂರು ವರ್ಷದ ಹಿಂದೆ ಸ್ಥಾಪಿಸಿದ ಸಂಸ್ಕೃತಿ(?)ಯಾಗಿದೆ. ಏನೂ ಗೊತ್ತಿಲ್ಲದ ಅಮಾಯಕರ ಮುಂದೆ ತಮ್ಮದು ಪರಿಶುದ್ಧ ಜನಾಂಗ ಉಳಿದವರೆಲ್ಲಾ ಅಬ್ರಾಹ್ಮಣರು, ಮೋಕ್ಷಕ್ಕೆ ಅನರ್ಹರು ಎಂದು ಹೇಳಿ ಕೆಂಪಗೆ ಕಾದ ಮುದ್ರೆಯಿಂದ ತಪ್ತಮುದ್ರಾಧಾರಣೆ ಮಾಡಿ ನಿಮ್ಮನ್ನು ಶುದ್ಧ ಮಾಡಿದ್ದೇವೆ ಎಂದು ಹೇಳಿ ಕಿವಿಗೆ ಹೂ ಇಡುತ್ತಾರೆ. ಇಂತಹಾ ಕೃತಕ ಪರಂಪರೆಗೆ ಅಂದು ಕೆಲವು ದೈ.ಬ್ರಾ.ರು. ಶರಣಾಗಿ, ತಪ್ತ ಮುದ್ರೆ ಒತ್ತಿಸಿಕೊಂಡು ಯಾವ ವಿಧದಲ್ಲಿಯೂ ಉನ್ನತಿ ಸಾಧಿಸದೇ 500 ವರ್ಷ ವ್ಯರ್ಥ ಮಾಡಿಕೊಂಡಿದ್ದು ನಮ್ಮ ದೊಡ್ಡ ದುರಂತ!! ಇಂತಹಾ "ಪರಿಪೂರ್ಣ ಸಂಸ್ಕಾರ ಹಿನ್ನೆಲೆ ಇರುವ ಮಧ್ವ ವೈಷ್ಣವ ಜನಾಂಗದ "ದ್ವಂದ್ವಾಚಾರ್ಯ" ಸ್ವಾಮಿಗಳು, ನಮ್ಮ ದೈವಜ್ಞ ಸಮಾಜದ ಕೆಲವು ಸ್ವಾಭಿಮಾನವಿಲ್ಲದ, ಗುಲಾಮಗಿರಿಗೆ ಒಗ್ಗಿರುವ ಸೋದೆ ಮಠದ ಮುಖ್ಯ ಶಿಷ್ಯರಿಗೆ ಇನ್ನೂ ಅಗತ್ಯವಿದ್ದಾರೆಯೇ? ಸೋದೆ ಮಠದಲ್ಲಿರುವ ನಮ್ಮ 'ಮಾಣಿ'ಗಳೇ ಉತ್ತರಿಸಬೇಕು.

ನಮ್ಮ ದೈ.ಬ್ರಾ.ರ ಪರಂಪರೆ, ಸಂಸ್ಕೃತಿ ಇಷ್ಟು ಪವಿತ್ರವಾಗಿದ್ದರೂ ಅಜ್ಞಾನ ಗುಂಪಿನ ಕೆಲವು ದೈ.ಬ್ರಾ. ಸಮಾಜ ಬಾಂಧವರಿಗೆ ಇನ್ನೂ ಸ್ವಂತಿಕೆಯ, ಸ್ವಾತಂತ್ರ್ಯದ, ಸ್ವಾಭಿಮಾನದ ಮಹತ್ವ ತಿಳಿದಿಲ್ಲ. ತಪ್ತ ಮುದ್ರೆ ಒತ್ತಿಸಿಕೊಳ್ಳುತ್ತಾ ಅಪವಿತ್ರರಾಗುತ್ತಿದ್ದಾರೆ. ಇವರಿಗೆ ಜನ್ಮ ನೀಡಿ, ಸಂಸ್ಕಾರ ಕಲಿಸಿದ ಸ್ವಾರ್ಥಪರಂಪರೆ ಎಂಬ ತಾಯಿಗಿಂತ, ನಮ್ಮನ್ನು 4 ಶತಮಾನಗಳ ಕಾಲ ಗುಲಾಮರನ್ನಾಗಿಸಿ ನಮ್ಮಿಂದ ಎಲ್ಲವನ್ನೂ ಪಡೆದು, ಕನಿಷ್ಠ ನಮಗೆ ಏನನ್ನೂ ನೀಡದೇ ಮೂಢ ನಂಬಿಕೆ, ದ್ವೇಷ, ಭೂತ, ಶಾಪವೆಂಬ ವಿಷ ಉಣಿಸಿದ ಪೂತನಿಯೇ ಇವರಿಗೆ ಮುಖ್ಯವಾದಳೇ??

ಕನಕದಾಸರಿಗಾಗಿ ಶ್ರೀಕೃಷ್ಣ ನಿಜವಾಗಿಯೂ ತಿರುಗಿದನೇ? :

ಈ ವಿಷಯದ ಬಗ್ಗೆ, ಏಕಾದಶಿ ನಿರ್ಣಯದ ಬಗ್ಗೆ, ಪಂಚಾಂಗ, ಪೂಜಾ ವಿಧಾನದ ಬಗ್ಗೆ ಉಡುಪಿ ಅಷ್ಟಮಠಗಳೊಳಗೆ, ಮಠದ ವಿದ್ವಾಂಸರ - ಪುರೋಹಿತರ ನಡುವೆ ಆಗಾಗ ಜಗಳಗಳು ನಡೆಯುತ್ತಲಿರುತ್ತವೆ. ಪತ್ರಿಕೆಗಳಲ್ಲಿ ಸಾರ್ವಜನಿಕ ಚರ್ಚೆಯೂ ಆಗುತ್ತದೆ. ಕನಕದಾಸರು ಕುರುಬರಾಗಿಯೂ ಜಾತಿಯ ಎಲ್ಲೆಯನ್ನು ಮೀರಿ ಬೆಳೆದವರು. ಉಡುಪಿಯ ಹಿರಿಮೆಯನ್ನು ಐತಿಹಾಸಿಕವಾಗಿ ಚಿರಸ್ಥಾಯಿಗೊಳಿಸಿದ **ಕೀರ್ತಿ ಕನಕದಾಸರಿಗೆ ಸಲ್ಲಬೇಕು.** ಕನಕನ ಕಿಂಡಿ, ಕನಕನಿಗೆ ಶ್ರೀಕೃಷ್ಣ ಗೋಡೆಯೊಡೆದು ದರ್ಶನ ನೀಡಿದ ತಾಣ. ಆದರೆ ಉಡುಪಿ ಕ್ಷೇತ್ರದ, ನಾಡಿನ ಪ್ರಖ್ಯಾತ ವಿದ್ವಾಂಸರಾದ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು **"ಇದೊಂದು ಕಟ್ಟುಕಥೆ, ಶ್ರೀ ಕೃಷ್ಣನು ಕನಕದಾಸರಿಗಾಗಿ ಪೂರ್ವದಿಂದ ಪಶ್ಚಿಮಕ್ಕೆ ತಿರುಗಲಿಲ್ಲ. ಶ್ರೀ ಕೃಷ್ಣನ ಮೂರ್ತಿಯ ಪ್ರತಿಷ್ಠಾಪನೆಯೇ ಪಶ್ಚಿಮಾಭಿಮುಖವಾಗಿತ್ತು"** ಎಂದು ಆಧಾರ ಸಹಿತವಾಗಿ ಸಾಬೀತುಗೊಳಿಸಿದ್ದಾರೆ. (ಶಿವಳ್ಳಿ ಬ್ರಾಹ್ಮಣರು : ಭಾಗ-1, ಪುಟ 108 ರಿಂದ 115) ಬನ್ನಂಜೆಯವರು ಕೃಷ್ಣ ಮಠದ ಹಳೆಯ ತಾಡವಾಲೆಯೊಂದರಲ್ಲಿಯ ಪುರಾತನ ದಾಖಲೆಗಳನ್ನು ಉಲ್ಲೇಖಿಸುತ್ತಾರೆ. "ಒಮ್ಮೆ ನಡುರಾತ್ರಿಯಲ್ಲಿ ಕನಕದಾಸರು ಕಣ್ಮುಚ್ಚಿ ಧ್ಯಾನ ಮಾಡುತ್ತಿದ್ದಾಗ ಸಣ್ಣದಾಗಿ ಭೂಮಿ ನಡುಗಿತಂತೆ (**ಕನಕದಾಸರ ನಡುರಾತ್ರಿಯಲಿ ಏಕೆ ನಡುಗಿದೆಯೊ ತಾಯಿ** ಎಂಬ ಒಂದು ಹಾಡಿನಲ್ಲಿ ಇದರ ಉಲ್ಲೇಖ ಇದೆ.) ಭೂಮಿ ನಡುಗಿದಾಗ ಕನಕರಿಗೂ ಕೃಷ್ಣನಿಗೂ ನಡುವೆ ಅಡ್ಡವಾಗಿದ್ದ ಪುರಾತನ ಮಣ್ಣಿನ ಗೋಡೆ ಕುಸಿದು ಸಣ್ಣದೊಂದು ಬಿರುಕು ಬಿಟ್ಟಿತು. ಧ್ಯಾನದಿಂದ ಎಚ್ಚೆತ್ತ ಕನಕದಾಸರು ಗೋಡೆಯ ಬಿರುಕಿನಲ್ಲಿ ಗರ್ಭಗುಡಿಯಲ್ಲಿರುವ ಕೃಷ್ಣನನ್ನು ಕಂಡು ತೃಪ್ತಿಗೊಂಡರು. ನಂತರ ವಾದಿರಾಜರು ಆ ಜಾಗದಲ್ಲಿ **ಕಿಟಿಕಿ** ಇರಿಸಿ ಕನಕದಾಸರು ಹೊರಾಂಗಣದಿಂದಲೇ ದಿನವೂ ಕೃಷ್ಣನನ್ನು ನೋಡಲು ವ್ಯವಸ್ಥೆ ಮಾಡಿದರು. (ಅಂತೂ ಒಳಗೆ ಬಿಡಲಿಲ್ಲ!)

ಈ ದಾಖಲೆ ಸಿಕ್ಕಿದಾಗ ನಾನು ತುಂಬಾ ಸಂತಸಪಟ್ಟೆ. ಇದು ಪ್ರಾಕೃತಿಕವಾದ ಸಹಜ ಘಟನೆ. ದುರ್ದೈವದಿಂದ ಈ ವಿಷಯ ಈ ತನಕವೂ ಮುದ್ರಣದ ಮುಖವನ್ನು ಕಂಡಿಲ್ಲ. ಇದಕ್ಕೆ ಪೂರಕವಾಗಿ ಇನ್ನೊಂದು ದಾಖಲೆ ಸಿಕ್ಕಾಗ ಈ ಸಂಗತಿ ಇನ್ನಷ್ಟು ದೃಢವಾಯಿತು. ಅದು ಕೃಷ್ಣ ಪ್ರತಿಷ್ಠೆಯ ಉಲ್ಲೇಖದ ದಾಖಲೆ. "ಪ್ರತಿಮೆ ಪೂರ್ವಾಭಿಮುಖವಾಗಿದ್ದರೆ ಅರ್ಚಕ ದೇವರಿಗೆ ಪಶ್ಚಿಮಾ ಅಭಿಮುಖವಾಗಿ ಕೂತು ಪೂಜೆ ಮಾಡುವಂತಿಲ್ಲ. ಆದ್ದರಿಂದ ಶ್ರೀಕೃಷ್ಣ ಪ್ರತಿಮೆಯನ್ನು ಪಶ್ಚಿಮಾಭಿಮುಖವಾಗಿ ಪ್ರತಿಷ್ಠೆ ಮಾಡಲಾಗಿದೆ. (ಸುತ್ತ ಇರುವ ಅಷ್ಟಮಠದಲ್ಲಿಯೂ ದೇವರ ಕೋಣೆ ಪಶ್ಚಿಮಕ್ಕಿದೆ.) ಕೃಷ್ಣ ಮಠದ ವಾಸ್ತು ವಿನ್ಯಾಸ ಇದನ್ನು ದೃಢಪಡಿಸುತ್ತದೆ, ಶ್ರೀ ಕೃಷ್ಣ ಮಂದಿರದ ಮೂಲ ವಾಸ್ತುವನ್ನು ಬದಲಾಯಿಸಿದ ದಾಖಲೆ ಇಲ್ಲ" ಎಂದು ಬನ್ನಂಜೆ ಗೋವಿಂದಾಚಾರ್ಯರು ದಾಖಲಿಸಿ ಕೊನೆಗೆ ಹೀಗೆ ಹೇಳುತ್ತಾರೆ...." ನನ್ನ ಗಮನಕ್ಕೆ ಬಂದ ಸಂಗತಿಗಳನ್ನು ಜನರ ಮುಂದಿಡುವುದಷ್ಟೇ ನನ್ನ ಕೆಲಸ. ನನಗೆ ಈ ಬಗ್ಗೆ ಯಾವ ಪೂರ್ವಾಗ್ರಹವೂ ಇಲ್ಲ. ಸತ್ಯದ ಅನ್ವೇಷಣೆಯಲ್ಲಿ ಜಾತಿ ಪ್ರೇಮದ ಆವೇಶ, ರಾಜಕೀಯ ಆವೇಶ ಅಡ್ಡವಾಗಬಾರದು. ಕೃಷ್ಣ ತಿರುಗಲಿಲ್ಲ ಎಂದರೆ ಕನಕ ದಾಸರು ಸಣ್ಣವರಾಗುವುದಿಲ್ಲ, ದೊಡ್ಡವರು ಯಾವಾಗಲೂ ದೊಡ್ಡವರೆ. ಸತ್ಯದ ಅನ್ವೇಷಣದಲ್ಲಿ ಸತ್ಯ ಮಾತ್ರ ಮುಖ್ಯವಾಗಬೇಕು...!!

ಅನೇಕ ಇತಿಹಾಸಕಾರರು ಸಂಶೋಧಿಸಿದ ದಾಖಲೆಗಳಲ್ಲಿ ಕನಕದಾಸರು ಉಡುಪಿಗೆ ಬಂದ ಕುರುಹೇ ಇಲ್ಲ. ಕನಕದಾಸರ ಯಾವ ರಚನೆಗಳಲ್ಲಿಯೂ ಉಡುಪಿಯ ಉಲ್ಲೇಖವೇ ಇಲ್ಲ. ಕಾಗಿನೆಲೆಯ ಚೆನ್ನಕೇಶವನನ್ನೇ ತಮ್ಮ ಕೀರ್ತನೆಗಳಲ್ಲಿ ಹಾಡಿ ಹೊಗಳಿದ್ದಾರೆ. ಶ್ರೀ ಎಸ್. ಪಡಿಯಾಣಿ ಎಂಬವರು 11-1-1934ರ ನವಯುಗ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಶ್ರೀ ಕೃಷ್ಣನ **ಮೂರ್ತಿ ತಿರುಗಿದ್ದು ಕಟ್ಟುಕಥೆ - ಕಾಲ್ಪನಿಕ** ಎಂದು ವಿಶ್ಲೇಷಿಸಿದ್ದಾರೆ.

ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿ ಶಿವಲಿಂಗ ಸ್ಥಾಪಿಸಿದ್ದು ಯಾರು?

ಉಡುಪಿ ಸೋದೆ ಮಠದ ವಾದಿರಾಜರು ಧರ್ಮಸ್ಥಳದ ಶಿವಲಿಂಗವನ್ನು ಸ್ಥಾಪಿಸಿದ್ದರು. ಭೂತರಾಜರನ್ನು ಕಾಶಿಗೆ ಕಳುಹಿಸಿ ಆ ಲಿಂಗವನ್ನು ತರಿಸಿದರು ಎಂದು ಮಾಧ್ವ ವೈಷ್ಣವರು ಹೇಳುತ್ತಾರೆ. ಇದು ಶುದ್ಧ ಸುಳ್ಳು ಪ್ರಚಾರ. ಧರ್ಮಸ್ಥಳ ಕ್ಷೇತ್ರ ಮಹಿಮೆ, ಇತಿಹಾಸದ ಅನೇಕ ಗ್ರಂಥ, ಕೃತಿಗಳನ್ನು ಓದಿರುವ ನಾನು [ಉಡುಪಿ ಮಾಧ್ವರು ಬರೆದ ಕಟ್ಟು ಕಥೆಗಳನ್ನು ಬಿಟ್ಟು] ಎಲ್ಲಿಯೂ ವಾದಿರಾಜರು ಧರ್ಮಸ್ಥಳದ ಶಿವಲಿಂಗ ಸ್ಥಾಪಿಸಿದ್ದರು ಎಂಬ ದಾಖಲೆಯನ್ನು ನೋಡಿಲ್ಲ. (ಈಶ್ವರ ದೇವರು - ಶಿವಲಿಂಗ -ಶೈವರು-ಸ್ಮಾರ್ತರು ಎಂದರೇ ಉರಿದು ಬಿದ್ದು ದ್ವೇಷ ಸಾಧಿಸುತ್ತಿದ್ದ ಈ ಮಾಧ್ವರು (ವಾದಿರಾಜ) ಶಿವಲಿಂಗ ಪ್ರತಿಷ್ಠಾಪಿಸಿದ್ದರು ಎಂದರೆ ಅದು ಹಾಸ್ಯಾಸ್ಪದವಾಗಿದೆ...) **ವಾದಿರಾಜರಿಗಿಂತ ಸುಮಾರು 300 ವರ್ಷಗಳ ಹಿಂದೆಯೇ ನೆಲ್ಯಾಡಿ**

ಬೀಡಿನಲ್ಲಿ ಅಮ್ಮು ದೇವಿ ಬಲ್ಲಾಳ್ತಿ ಮತ್ತು ಬರ್ಮಣ್ಣ ಹೆಗ್ಗಡೆ ದಂಪತಿಗಳ ಕಾಲದಲ್ಲಿ ಮಂಗಳೂರಿನ ಕದ್ರಿ ಮಂಜುನಾಥ ದೇವಸ್ಥಾನದ ಕೊಳದಲ್ಲಿ ನಾಥ ಪಂಥದ ಮಚ್ಛೇಂದ್ರನಾಥರು ಕಾಶಿಯಿಂದ ತಂದಿರಿಸಿದ್ದ ಶಿವಲಿಂಗವನ್ನು ಶಿವನ ಅಂಶಾವತಾರಗಳಾದ ನಾಲ್ವರು ಧರ್ಮ ದೇವತೆಗಳು ತಮ್ಮ ಭಂಟ ಅಣ್ಣಪ್ಪ ಸ್ವಾಮಿ'ಗೆ ಆದೇಶ ನೀಡಿ ತರಿಸಿ ಧರ್ಮಸ್ಥಳದಲ್ಲಿ ಸ್ಥಾಪಿಸಿದ್ದರು.

ಮುಂದೆ 16ನೇ ಶತಮಾನದಲ್ಲಿ ದೇವರಾಜ ಹೆಗ್ಗಡೆಯವರ ಕಾಲದಲ್ಲಿ ವಾದಿರಾಜರು ತಾಂತ್ರಿಕ ವಿಧಿಯಿಂದ ಸ್ಥಾಪಿಸಿದ ಶಿವಲಿಂಗವನ್ನು ವೈಷ್ಣವ ಪೂಜಾ ವಿಧಾನ ರೀತಿಯಲ್ಲಿ ಪುನರ್ ಪ್ರತಿಷ್ಠಾಪಿಸಿ ಶಿವಲಿಂಗದ ಶಿರದ ಮೇಲೆ ವಿಷ್ಣು ಸಾಲಿಗ್ರಾಮವಿರಿಸಿ ಶಿವಳ್ಳಿ ಮಾಧ್ವ ವೈಷ್ಣವರನ್ನು ಪುರೋಹಿತರನ್ನಾಗಿ ನೇಮಿಸಿದ್ದರು. [ಇಲ್ಲಿಯೂ ವಾದಿರಾಜರು ತಮ್ಮ ಮಾಧ್ವ ಬುದ್ಧಿಯನ್ನೂ ತೋರಿಸಿಬಿಟ್ಟರು - ಮುಂದೆ ಕ್ಷೇತ್ರದ ನಡಾವಳಿ ದರ್ಶನದಲ್ಲಿ ಧರ್ಮದೇವತೆಗಳು ನೀಡಿದ ಸೂಚನೆಯಂತೇ ಶಿವಲಿಂಗದ ಮೇಲಿರಿಸಿದ ವಿಷ್ಣು ಸಾಲಿಗ್ರಾಮವನ್ನು ತೆಗೆದು ಲಿಂಗದ ಪೀಠದ ಕೆಳಗೆ ಇರಿಸಲಾಗಿದೆ. ಇದು ಅಧಿಕೃತ ಇತಿಹಾಸ.] ಮಂಜುನಾಥ ಸ್ವಾಮಿಯ 'ನಾಗಾಭರಣ'ವೆಂಬ ದೇವರ ಆಭರಣದಲ್ಲಿ ಅದನ್ನೊಪ್ಪಿಸಿದ ದಿನಾಂಕ ಸ್ಪಷ್ಟವಾಗಿ ಕೆತ್ತಲ್ಪಟ್ಟಿದೆ, ಅದು ವಾದಿರಾಜ ಸ್ವಾಮಿಗಳ ಕಾಲಕ್ಕಿಂತಲೂ ಹಿಂದಿನದು ಎಂದು ತಿಳಿದು ಬರುತ್ತದೆ. ಮೂವತ್ತು ವರ್ಷಗಳ ಹಿಂದೆ ನಮ್ಮ ದೈ. ಸಮಾಜದ ಬೆಂಗಳೂರಿನ ಸ್ವಘೋಷಿತ ಬುದ್ಧಿವಂತನು 'ಶೃಂಗಾರ'ದಿಂದ ಮೇಲಿನ ಇತಿಹಾಸವನ್ನು ಮರೆಮಾಚಿ ಉಡುಪಿಯ ವಾದಿರಾಜರೇ ಧರ್ಮಸ್ಥಳವನ್ನು ಸ್ಥಾಪಿಸಿದ್ದು" ಎಂದು ವಿತಂಡವಾದ ಮಂಡಿಸಿದಾಗ ವೀರೇಂದ್ರ ಹೆಗ್ಗಡೆಯವರೇ ಆ ತುಂಬಿದ ಸಭೆಯಲ್ಲಿ ಇದನ್ನು ಖಂಡಿಸಿ ಇವನ ಶೃಂಗಾರ ಕಳಚಿ ಈ ವಿದೂಷಕನನ್ನು ಕರೆ ತಂದ ಮಂಗಳೂರಿನ ವಜ್ರ ವ್ಯಾಪಾರಿಯ ನೀರಿಳಿಸಿದ್ದರು.

—— ದೈವಜ್ಞ ಸಮಾಜದ ಪರವಾಗಿ ಧರ್ಮಸ್ಥಳಕ್ಕೆ ಬೆಳ್ಳಿಲಾಲಕಿ ನೀಡಿದ್ದ್ಯಾರು? ——

ಹಯಗ್ರೀವ ನಮನ [ಪ್ರಕಾಶಕರು : ಶೃಂಗಾರ ನಾಗರಾಜ] ಗ್ರಂಥದಲ್ಲಿ 26ನೇ ಪುಟದಲ್ಲಿ "ವಾದಿರಾಜರು ಧರ್ಮಸ್ಥಳದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿ ತಮ್ಮ ಮುಖ್ಯ ಶಿಷ್ಯರಾದ ದೈವಜ್ಞ ಬ್ರಾಹ್ಮಣರಿಂದಲೇ ಮಂಜುನಾಥ ಸ್ವಾಮಿಗೆ ಒಂದು ಬೆಳ್ಳಿ ಲಾಲಕಿಯನ್ನು ಮಾಡಿಸಿ ಸಮರ್ಪಿಸುವುದಾಗಿ ಸಂಕಲ್ಪ ಮಾಡಿದರು" ಎಂಬ ಉಲ್ಲೇಖವಿದೆ. ಇದು ಸುಳ್ಳು ಕಟ್ಟುಕಥೆ. ದೈ.ಬ್ರಾ.ಸಮಾಜದ ಹೆಸರನ್ನು ವಾದಿರಾಜರು ಹೇಳಿದ್ದು ಎಂದು ಕಾಲ್ಪನಿಕವಾಗಿ ಹೇಳಿ ಧರ್ಮಸ್ಥಳಕ್ಕೆ 17-2-1951ನೇ ಶನಿವಾರ ಬೆಳ್ಳಿ ಲಾಲಕಿ ಸಮರ್ಪಿಸಿದವರು ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿಯ ತಂದೆಯವರು. ಶೇಟ್‌ರವರು ಅದನ್ನು ಸ್ಥಳಕ್ಕೆ ಸಲ್ಲಿಸಲು ಏನು **ಪ್ರೇರಣೆ? ಯಾವ ನಿಗೂಢ ಕಾರಣ? Shetರವರ ಯಾವ ಪಾಪದ ಪ್ರಾಯಶ್ಚಿತ್ತಕ್ಕೆ ಇದನ್ನು ಮಂಜುನಾಥನ ಸನ್ನಿಧಿಗೆ ಸಮರ್ಪಿಸಲಾಯಿತು?** ಎಂಬುದನ್ನು ಅವರಿಂದಲೇ ಅವಶ್ಯವಾಗಿ ಕೇಳಿ ತಿಳಿದುಕೊಳ್ಳಿರಿ. (ತಾವು ಅನಾಚಾರ ಮಾಡಿ ಪ್ರಾಯಶ್ಚಿತ್ತವನ್ನು ಸಮಾಜದ ಖರ್ಚಿನಲ್ಲಿ ಮಾಡಿ ಹರಕೆ ತೀರಿಸುವ ಪರಂಪರೆ ಇವರಿಗಿದೆ.)

—— ಉಡುಪಿ ಸೋದೆ ಮಠಕ್ಕೆ ದೈವಜ್ಞಬ್ರಾಹ್ಮಣ "ಪಟ್ಟ ಶಿಷ್ಯ"ನಾಗಲಿಲ್ಲ.. ಯಾಕೆ? ——

1950-60-70ರ ದಶಕದಲ್ಲಿ ಮುದ್ರಣಗೊಂಡ ದೈ.ಸಮಾಜದ ಅನೇಕ ಸ್ಮರಣ ಸಂಚಿಕೆ, ವಿಶೇಷಾಂಕ ಪತ್ರಿಕೆಗಳಲ್ಲಿ ಪದೇ ಪದೇ ಕಾಣುವ ವಾಕ್ಯವೆಂದರೆ... "ವಾದಿರಾಜ ಸ್ವಾಮಿಗಳು ದೈ.ಬ್ರಾ.ರಿಂದ ಹಯಗ್ರೀವ ದೇವರ ಮೂರ್ತಿ ಪಡೆದ ಸಂದರ್ಭದಲ್ಲಿ ದೈ. ಬ್ರಾಹ್ಮಣರನ್ನು ತಪ್ತ ಮುದ್ರಾಧಾರಣಗಳಿಂದ 'ಪವಿತ್ರರಾಗಿಸಿ' ವೈಷ್ಣವ ದೀಕ್ಷೆ ನೀಡಿ" ಮುಂದೆ ಭವಿಷ್ಯದಲ್ಲಿ ಸೋದೆ ಮಠಕ್ಕೆ ಪಟ್ಟ ಶಿಷ್ಯನನ್ನು ದೈ. ಬ್ರಾಹ್ಮಣರಿಂದಲೇ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟು, ನಂತರ ಹಯಗ್ರೀವ ಮೂರ್ತಿ ಪಡೆದರು ಎಂದು ಗೋಚರವಾಗುತ್ತದೆ" ಎಂಬ ಉಲ್ಲೇಖವಿದೆ. (ಮಂಗಳೂರು ದೈವಜ್ಞ ಬ್ರಾಹ್ಮಣ ಸಂಘದ ರಜತ ಮಹೋತ್ಸವ ಸಂಚಿಕೆ : ಪುಟ ಸಂಖ್ಯೆ 23) ವಾದಿರಾಜರ ಈ ವಚನ ನಿಜವೇ ಆಗಿದ್ದಲ್ಲಿ ಅವರ ಕಾಲದಿಂದ ವಿಶ್ವೇಂದ್ರತೀರ್ಥ ಮತ್ತು ಅವರ ಪಟ್ಟ ಶಿಷ್ಯ ಶ್ರೀ ವಿಶ್ವೋತ್ತಮ ತೀರ್ಥರವರೆಗೆ 16 ಯತಿಗಳು ಬಂದು ಹೋಗಿದ್ದಾರೆ. ಇವರ್‍ಯಾರಿಗೂ ಸೋದೆ ಮಠದ ಮುಖ್ಯ ಶಿಷ್ಯ ದೈ. ಬ್ರಾ.ರಿಂದ ಪಟ್ಟ ಶಿಷ್ಯನನ್ನು ಪಡೆಯಬೇಕೆಂದು ಸ್ವತಃ ವಾದಿರಾಜರಿಂದ ಅಥವಾ ಹಯಗ್ರೀವ - ಭೂತರಾಜರಿಂದ ಯಾರಿಗೂ ಸ್ವಪ್ನ ಪ್ರೇರಣೆ, ಸೂಚನೆಯಾಗಲಿಲ್ಲವೇ? ಇಂತಹಾ ಅತ್ಯದ್ಭುತ, ರೋಮ ರೋಮಾಂಚಕಾರಿ ಕಟ್ಟು ಕಥೆ ಕಟ್ಟಿದ ತಪ್ತ ಮುದ್ರಾಧಾರಣಾಧೀಶ್ವರರು ಉತ್ತರಿಸಬಲ್ಲೀರಾ? ಇತ್ತೀಚೆಗೆ ಪರ್ಯಾಯ ಸೋದೆ ಶ್ರೀಗಳು ಮಂಗಳೂರಿಗೆ ಬಂದಾಗ ದೈ.ರು ವಾದಿರಾಜ ಪೀಠದ ಮುಖ್ಯ ಶಿಷ್ಯರು ಎಂದು ಈ ಮಾಣಿಗಳು ಘೋಷಿಸಿದಾಗ, ನಿಜವಾದ ಮುಖ್ಯ ಶಿಷ್ಯರಾದ ಶಿವಳ್ಳಿ ಮಟ್ಟು ಬ್ರಾಹ್ಮಣರು, ಕೋಟೇಶ್ವರ ಮಾಗಣೆಯವರು ಇದನ್ನು ಖಂಡಿಸಿ ಇವರಿಗೆ ಬೈದು ಕಾರ್ಯಕ್ರಮ ಬಹಿಷ್ಕರಿಸಿದ್ದು ಮನರಂಜನೀಯವಾಗಿತ್ತು.!! ಎಂದು ಅಧಿಕೃತ ಮೂಲಗಳಿಂದ ತಿಳಿದುಬಂದಿದೆ.

——— ದೈವಜ್ಞ ಬ್ರಾಹ್ಮಣ ಗುರುಪೀಠ ಸಂಸ್ಥಾಪನೆಯ ಕಥೆ-ವ್ಯಥೆ-ಯಶಸ್ಸು... ———

1979-80 ಅಖಿಲ ಭಾರತ ಸಮಸ್ತ ದೈ.ಬ್ರಾ. ಸಮಾಜಕ್ಕೆ ಒಂದು ಸ್ವತಂತ್ರ ಗುರು-ಪೀಠ- ಕುಲಗುರುಗಳು ಬೇಕೇ ಬೇಕು ಎಂಬ ಏಕ ಸಂಕಲ್ಪದೊಂದಿಗೆ ಸಮಾಜ ಕಾರ್ಯಶೀಲವಾದ ನಿರ್ಣಾಯಕ ಘಟ್ಟವದು. ಶಿವಳ್ಳಿ ಮಾಧ್ವರು - ಸೋದೆ ಮಠದವರು ನಮಗೆ ಮಾಡುತ್ತಿದ್ದ ಊಟದ ಪಂಕ್ತಿಭೇಧ, ಅವಮಾನ ಅಸಹನೀಯವಾಗಿ ಪ್ರತೀ ದೈ.ಬ್ರಾ.ನಲ್ಲಿ ಸ್ವಾಭಿಮಾನ ಪ್ರಜ್ವಲಿಸುತ್ತಿತ್ತು.

24-11-1983ರ ವಿಚಾರ ಗೋಷ್ಠಿ ಸಮಿತಿಯವರ ಕೋರಿಕೆ ಮೇರೆಗೆ ನಕಾರಾತ್ಮಕವಾಗಿ ಸ್ಪಂದಿಸಿದ ಸೋದೆ ಮಠದ ಶ್ರೀ ವಿಶ್ವೋತ್ತಮ ಸ್ವಾಮಿಗಳು 5-12-1983ರಂದು ಬೆಂಗಳೂರು ದೈವಜ್ಞ ಬ್ರಾಹ್ಮಣ ಸಂಘಕ್ಕೆ ಬರೆದ ಪತ್ರದಲ್ಲಿ "ಅನ್ಯ ಪಂಗಡದವರಿಗೆ ಸನ್ಯಾಸಾಶ್ರಮ ನೀಡಿದ ದಾಖಲೆ ಮಠದಲ್ಲಿ ಇಲ್ಲ. ನಿಮ್ಮ ವಟುವಿಗೆ ಸನ್ಯಾಸ ನೀಡುವ ವಿಚಾರದಲ್ಲಿ ನೀವು ಬದಲಿ ವ್ಯವಸ್ಥೆ ಮಾಡಿಕೊಳ್ಳಿ, ನೀವು ಆಯ್ದುಕೊಳ್ಳುವ ವ್ಯವಸ್ಥೆಯಲ್ಲಿ ನಮ್ಮ ಯಾವ ಅಭ್ಯಂತರವೂ ಇಲ್ಲ" ಎಂದು ಸ್ಪಷ್ಟವಾಗಿ ತಿಳಿಸಿದ್ದರು. ನಂತರ 30-7-1985ರಲ್ಲಿ ಸೋದೆ ಶ್ರೀಗಳು ಪೇಜಾವರ ಶ್ರೀಗಳಿಗೆ ಪತ್ರ ಬರೆದು ತಾನೇ ಸ್ವತಃ ಸನ್ಯಾಸ ದೀಕ್ಷೆ ನೀಡುವುದನ್ನು ತಿರಸ್ಕರಿಸಿ "ದೈವಜ್ಞರ ಸ್ವತಂತ್ರ ಗುರುಪೀಠದ ವಿಷಯದಲ್ಲಿ ನೀವೇ ಏನಾದರೂ ವಿಚಾರ ಮಾಡೋಣವಾಗಲಿ, ತಾವು ತಮ್ಮ ಪರ್ಯಾಯದ ಕಾಲದಲ್ಲಿಯೇ ಸನ್ಯಾಸ ದೀಕ್ಷೆ ನೀಡಿದರೆ (ದೈವಜ್ಞ ವಟುವಿಗೆ) ನನ್ನ ಯಾವುದೇ ಆಕ್ಷೇಪ, ಅಭ್ಯಂತರವಿಲ್ಲ." ಎಂದು ಭಿನ್ನವಿಸಿಕೊಂಡಾಗ ಪೇಜಾವರ ಶ್ರೀಗಳು ಉದಯವಾಣಿ ಮತ್ತು ಮುಂಗಾರು ಪತ್ರಿಕೆಗೆ ಅಗೋಸ್ಟ್ 1985ರಂದು ಮಠದಿಂದ ಅಧಿಕೃತ ಪ್ರಕಟಣೆ ನೀಡಿ "ಸೋದೆ ಶ್ರೀ ವಿಶ್ವೋತ್ತಮ ತೀರ್ಥರ ಸಲಹೆಯಂತೇ ಪೇಜಾವರ ಶ್ರೀಗಳು ಪ್ರಚಲಿತ ಕ್ರಮದಂತೆ "ಶ್ರೀ ಮಧ್ವಾಚಾರ್ಯರ ನಿರ್ಣಯ ಪ್ರಶ್ನೆ"ಯನ್ನು ನೋಡಿದಾಗ ಮಧ್ವಾಚಾರ್ಯರಿಂದ ಅತ್ಯುತ್ತಮ ಸೂಚನೆಗಳು ಕಂಡು ಬಂದಿದೆ" ಎಂದು ಪ್ರಕಟಣೆ ನೀಡಿದ್ದರು.

ತಾ. 10-2-1985ರಂದು ಪೇಜಾವರ ಶ್ರೀಗಳು ಉಡುಪಿಯಲ್ಲಿ ಅಖಿಲ ಭಾರತ ದೈ.ಬ್ರಾ.ರ ಸರ್ವ ಸಂಘ ಸಂಸ್ಥೆ (ರಿ.)ಗಳ ಸಭೆ ಕರೆದರು. ಆ ಸಭೆಯಲ್ಲೂ ಒಟ್ಟೂ 88 ಠರಾವು ಬಂದಿದ್ದವು. ಅದರಲ್ಲಿ 76 ಠರಾವು ದೈ.ಬ್ರಾ. ಸಮಾಜಕ್ಕೆ ಸ್ವತಂತ್ರ ಗುರುಪೀಠ ಸ್ಥಾಪನೆಯಾಗಬೇಕೆಂದು ಪರವಾಗಿ, ಹಾಗೂ ಉಳಿದ 12 ಠರಾವು ಸ್ವತಂತ್ರ ಗುರುಪೀಠ ಬೇಕು, ಆದರೆ.... ಸನ್ಯಾಸ ದೀಕ್ಷೆ ಸೋದೆ ವಾದಿರಾಜ ಪೀಠದಿಂದಲೇ ದೊರಕಬೇಕು ಎಂದು ಸೂಚಿಸಿದ್ದರು. **95% ಭಾರೀ ಬಹುಮತ ಪರವಾಗಿ ಬಂದ ನಂತರ** ಪೇಜಾವರ ಶ್ರೀಗಳು ನಿಯೋಜಿತ ದೈ.ಬ್ರಾ. ವಟುವಿಗೆ ಬ್ರಹ್ಮೋಪದೇಶ ಕೊಡಿಸಲು **27-6-1985ರ ಶುಭ ಮುಹೂರ್ತವನ್ನು** ನಿಶ್ಚಯಿಸಿ ದೈ.ಬ್ರಾ.ರ ಭಾವೀ ಕುಲಗುರುಗಳಾದ ಚಿ|| ರಮೇಶ ರಾಮಚಂದ್ರ ಭಟ್‌ನಿಗೆ ಉಡುಪಿ ಕೃಷ್ಣಮಠದ ರಾಜಾಂಗಣದಲ್ಲಿಯೇ ಶ್ರೀಕೃಷ್ಣ ಮಂತ್ರೋಪದೇಶಿಸಿದ್ದರು. ಹಿಂದಿನ ದಿನದಂದು ಪೇಜಾವರ ಶ್ರೀಗಳಿಗೆ ಪೂಜಾ ಸಮಯದಲ್ಲಿ ದೇವರ ಪ್ರೇರಣೆಯಾಗಿ ದೈ. ಮಠಾಧೀಶರಿಗೆ "ಶ್ರೀ ವಿಶ್ವರಾಜ ತೀರ್ಥ" ಎಂಬ ಪುಣ್ಯ ನಾಮವನ್ನು ಘೋಷಿಸಿದ್ದರು. ಅಲ್ಲದೇ ದೈವಸಂಕಲ್ಪದ ಬಗ್ಗೆ ಪುನಃ ಶ್ರೀ ಕೃಷ್ಣನಲ್ಲಿ ಈ ವಿಷಯವನ್ನು 'ಪ್ರಸಾದ' ರೂಪದಲ್ಲಿ ನಿರ್ಣಯ ನೀಡುವಂತೆ ಪರ್ಯಾಯ ಪೇಜಾವರ ಶ್ರೀಗಳು ಸಂಕಲ್ಪಿಸಿ ಪ್ರಾರ್ಥಿಸಿದಾಗ ಉತ್ತಮ ಫಲಿತಾಂಶವೂ, ಮುಂದುವರೆಯುವಂತೇ ಶುಭ ಸೂಚನೆಯೂ ದೊರಕಿತು. ಇದರಿಂದ ಪೂರ್ಣ ತೃಪ್ತರಾದ ಪೇಜಾವರ ಸ್ವಾಮಿಗಳು ನಿಯೋಜಿತ ವಟುವಿಗೆ ಸನ್ಯಾಸ ದೀಕ್ಷೆಯನ್ನು ಸೋದೆ ಸ್ವಾಮಿಗಳು ಕೊಡದಿದ್ದರೆ ಅಖಿಲ ಭಾರತೀಯ ಮಧ್ವ ಮಹಾಮಂಡಲದ ಅಧ್ಯಕ್ಷನಾದ ನಾನೇ ಸ್ವತಃ **6-12-1985** ರಂದು ನೀಡುವುದಾಗಿ 'ವಚನ' ನೀಡಿ ಶುಭ ಮುಹೂರ್ತ ಸೂಚಿಸಿದ್ದರು.

18-8-1985ರಲ್ಲಿ ಕರ್ಕಿಯಲ್ಲಿ ದೈ. ಗುರುಮಠದ ಕಟ್ಟಡಕ್ಕೆ ಶಂಕು ಸ್ಥಾಪನೆ ಹಾಕುವಾಗ ಪೇಜಾವರ ಶ್ರೀಗಳು ಶುಭ ಸಂದೇಶ, ಆಶೀರ್ವಚನ ಕಳುಹಿಸಿದ್ದರು. ಅಂತಿಮ ಹಂತದಲ್ಲಿ ಸೋದೆ ಶ್ರೀಗಳು 15-8-1985ರ ಉದಯವಾಣಿಯಲ್ಲಿ "ವಾದಿರಾಜರಿಂದ ತಪ್ತಮುದ್ರಾಧಾರಣೆ ಮಾಡಿಸಿಕೊಂಡು ಪವಿತ್ರರಾಗಿ, ವೈಷ್ಣವ ದೀಕ್ಷೆ ಪಡೆದು ನಮ್ಮ ಮಠದ ಅಭಿಮಾನಿ ಶಿಷ್ಯರಾಗಿರುವ ದೈವಜ್ಞರಿಗೆ ಬೇರೊಂದು ಗುರು - ಗುರುಪೀಠ ಸ್ಥಾಪಿಸಲು ಸೋದೆ ವಾದಿರಾಜ ಮಠವು ಯಾವ ವ್ಯಕ್ತಿಗೂ, ಯಾರಿಗೂ ಅನುಮತಿ ಮತ್ತು ಅಧಿಕಾರ ನೀಡುವುದಿಲ್ಲ, ಹಾಗೂ ಇದಕ್ಕೆ ನಮ್ಮ ಸಮ್ಮತಿಯೂ ಇಲ್ಲ." ಎಂದು ಪ್ರಕಟಣೆ ನೀಡಿ ತನ್ನ ಹಿಂದಿನ ನಿರ್ಧಾರದಿಂದ ಹಿಮ್ಮೆಟ್ಟಿ ಹೊಡೆದು ಸಮಸ್ತ ದೈ.ಬ್ರಾ. ಸಮಾಜಕ್ಕೆ ಶಾಕ್ ನೀಡಿದರು. ಮಾತ್ರವಲ್ಲ - ಪೇಜಾವರ ಶ್ರೀಗಳ ಮೇಲೆ ಸ್ವತಃ ತಾವು ಮತ್ತು ಮಧ್ವ ಸಮಾಜದ ವ್ಯಾಪಾರಸ್ಥರು, ದಾನಿಗಳು, ಹಣವಂತರಿಂದ ಬ್ಲಾಕ್‌ಮೇಲ್ ಮಾಡಿಸಿ ಒತ್ತಡ ಹೇರಿ ವಕೀಲರ ಮುಖಾಂತರ ಕಾನೂನು ನೋಟೀಸ್ ಕೊಟ್ಟು ಪೇಜಾವರ ಸ್ವಾಮಿಗಳನ್ನು ಕೋರ್ಟಿಗೆ ಎಳೆಯುವ ಬೆದರಿಕೆ ಹಾಕಿದ ಕಾರಣ

ಗೊಂದಲಕ್ಕೊಳಗಾದ ಪೂಜ್ಯ ಪೇಜಾವರ ಶ್ರೀಗಳು 30-8-1985ರ ಉದಯವಾಣಿಯಲ್ಲಿ ಪ್ರಕಟಣೆ ನೀಡಿ (Page No. 10) "ಸೋದೆಯ ವಿಶ್ವೋತ್ತಮ ತೀರ್ಥರು ಕೋರ್ಟ್ ನೆಲೆಯಲ್ಲಿ ವಿರೋಧಿಸುವ ಸೂಚನೆ ಬಂದಿರುವುದರಿಂದ ದೈ.ಬ್ರಾ. ಪೀಠಕ್ಕೆ ಸನ್ಯಾಸ ದೀಕ್ಷೆ ನೀಡುವ ನನ್ನ ನಿರ್ಧಾರ - ವಾಗ್ದಾನವನ್ನು ಕೈ ಬಿಟ್ಟಿದ್ದೇನೆ, ಹಾಗೂ ಸೋದೆ ಶ್ರೀಗಳ ವಿರುದ್ಧವಾಗಿ ಇದನ್ನು ಮುನ್ನಡೆಸುವ ಆಶ್ವಾಸನೆಯನ್ನು ಎಂದೂ ನಾನು ದೈ.ಬ್ರಾ. ಸಮಾಜಕ್ಕೆ ನೀಡಿರಲಿಲ್ಲ" ಎಂದು ಉಲ್ಟಾ ಹೊಡೆದರು. ದೈ.ಬ್ರಾ. ಸಮಾಜಕ್ಕೆ ಇದು ಎರಡನೇಯ ವಚನ ಭ್ರಷ್ಟತೆಯ ಪ್ರಹಾರವಾಗಿತ್ತು. ವಾಗ್ದಾನ ನೀಡುವುದು, ನಿರಾಯಾಸವಾಗಿ ಮುರಿಯುವುದು - ಇದು ಗುರುಗಳ ಲಕ್ಷಣವೇ?

ಈ 'ಉಲ್ಟಾ-ಪಲ್ಟಾ" ದ್ವಂದ್ವಾಚಾರ್ಯ ಸ್ವಾಮಿಗಳ ವಚನ ಭ್ರಷ್ಟತೆ ನಡೆಯಿಂದಾಗಿ ದೈ.ಸಮಾಜವು ನಿರಾಶೆಗೊಳಗಾದರೂ ಸುಧಾರಿಸಿಕೊಂಡು ಈ ಬಗ್ಗೆ 29-9-1985ರಂದು ಮಂಗಳೂರಿನಲ್ಲಿ ನಡೆದ ದೈ.ಬ್ರಾ. ಗುರುಪೀಠ ಸಂಸ್ಥಾಪನಾ ಸಮಿತಿಯ ಬೃಹತ್ ಸಭೆಯಲ್ಲಿ "ಹೃಷಿಕೇಶದಲ್ಲಿರುವ ಸ್ವಸಮಾಜದ ಸನ್ಯಾಸಿ ಶ್ರೀ ಪ್ರಜ್ಞಾನಂದ ಸರಸ್ವತಿ ಸ್ವಾಮಿಗಳಿಂದ ದೀಕ್ಷೆ ಕೊಡಿಸುವುದಾಗಿ ನಿರ್ಣಯಿಸಿ ತಿಳಿಸಿದಾಗ ಅವರೂ ಸಂತೋಷದಿಂದ ಒಪ್ಪಿದ್ದರು. ಇವನ್ನು ತಿಳಿದ ಮಂಗಳೂರಿನ **10** ಮಂದಿ ಸ್ವಸಮಾಜದ ಸಮಾಜ ದ್ರೋಹಿಗಳು ಸ್ವತಂತ್ರ ಗುರುಪೀಠ ಸ್ಥಾಪನೆ ವಿರೋಧಿಸಿ, ಪೇಜಾವರ ಸ್ವಾಮಿಗಳಿಗೆ, ದೈವಜ್ಞರ ಭಾವೀ ಯತಿಗಳಿಗೆ, ನಂತರ ಹೃಷಿಕೇಶದ ಪ್ರಜ್ಞಾನಂದ ಸ್ವಾಮಿಗಳಿಗೆ ವಕೀಲರ ನೋಟೀಸ್ ಜಾರಿಮಾಡಿ ಇಂತಹಾ ಪವಿತ್ರ ಕಾರ್ಯವನ್ನು ನ್ಯಾಯಾಲಯಕ್ಕೆ ಒಯ್ದು ಅಡ್ಡಿಗೊಳಿಸಿದರು. ಸೋದೆ ಸ್ವಾಮಿಗಳಂತೂ ಹೊಸ ಮಠವನ್ನು ಸ್ಥಾಪನೆ ಮಾಡಲು ಹೊರಟವರನ್ನು ಕರೆದು "ನೀವು ನಿಮ್ಮದೇ ಮಠ-ಗುರು ಮಾಡಿ ನಮ್ಮ ಆಕ್ಷೇಪ, ವಿರೋಧ ಇಲ್ಲ" ಎಂದು ಹೇಳುವುದು. ಅವರು ಹೊರಟ ಮೇಲೆ ಇತ್ತ ಕಡೆಯಿಂದ ಹೊಸ ಮಠ ಸ್ಥಾಪನೆಯ ವಿರೋಧಿಗಳನ್ನು ಕರೆದು ಬಿಸ್ಕೆಟ್ ಹಾಕಿ "ನೀವು ನಮ್ಮ ಮಠದ ಅಭಿಮಾನಿ ಶಿಷ್ಯರಾಗಿಯೇ ಉಳಿಯಬೇಕು. ಅವರು ಹೊನ್ನಾವರದ ಕರ್ಕಿಯಲ್ಲಿ ಹೊಸ ಮಠ ಮಾಡದಂತೇ ಕೇಸು ಹಾಕಿ, ಕೋರ್ಟು ಮೂಲಕ ತಡೆಯಾಜ್ಞೆ ತಂದು ತಡೆಯಿರಿ" ಎಂದು ಛೂ ಬಿಡುವುದು. ಈ ರೀತಿ ನಮ್ಮೊಳಗೆ ಒಡಕು ಮೂಡಿಸಿ ಮುಂದಿನ ಆಟಕ್ಕೆ ಅಣಿಯಾಗುತ್ತಿದ್ದರು. ಆದರೆ ವಿಧಿಯ - ದೇವರ ಸಂಕಲ್ಪವೇ ಬೇರೆಯಾಗಿತ್ತು. ದೈ.ಬ್ರಾ. ಸಮಾಜದ ಮೂಲದೇವತೆ ಗೋವಾ ಕಾಸರಪಾಲದ ಶ್ರೀ ಕಾಳಿಕಾದೇವಿಗೆ ಪ್ರಾರ್ಥನೆ ಸಲ್ಲಿಸಿದ ಮೇಲೆ ಪವಿತ್ರ ಅಷ್ಟಮಂಗಲ ಪ್ರಶ್ನೆ ಕೇಳಲಾಗಿ ದೇವರ ಆದೇಶದಂತೇ ಶ್ರೀ ಜ್ಞಾನೇಶ್ವರೀ ದೇವಿ, ಗಣಪತಿ, ಸುಬ್ರಹ್ಮಣ್ಯ ದೇವರನ್ನು ಶ್ರೀ ಚಕ್ರ ಸಹಿತ ಪಟ್ಟದೇವತೆ - ಪರಿವಾರ ದೇವತೆಯಾಗಿ ಕರ್ಕಿಯಲ್ಲಿ ಸ್ಥಾಪಿಸಿ - ಶೃಂಗೇರಿ ಶ್ರೀಗಳ ಆದೇಶದಂತೆ ಶ್ರೀ ಆದಿಶಂಕರಾಚಾರ್ಯ ಪೀಠ ಪರಂಪರೆಯ ಹಂಪೀ ವಿರೂಪಾಕ್ಷ ವಿದ್ಯಾರಣ್ಯ ಪೀಠಾಧಿಪತಿ ಶ್ರೀಮದ್ ಅಭಿನವೋದ್ದಂಡ ನರಸಿಂಹ ಭಾರತೀ ಸ್ವಾಮಿಗಳಿಂದ 1986ರಲ್ಲಿ ಶ್ರೀಕ್ಷೇತ್ರ ಕರ್ಕಿಯಲ್ಲಿಯೇ ನಿಯೋಜಿತ ವಟುವಿಗೆ ಸನ್ಯಾಸ ದೀಕ್ಷೆ ನೀಡಲಾಯಿತು. ಧಾರವಾಡದ ಶ್ರೀ ಶಂಕರಾಚಾರ್ಯ ವೇದ ಪಾಠಶಾಲೆಯಲ್ಲಿ ವೇದಶಾಸ್ತ್ರ ಶಿಕ್ಷಣ ಪೂರೈಸಿದ ಬಳಿಕ 1996ರಲ್ಲಿ ಶೃಂಗೇರಿ ಶಾರದಾಪೀಠದ ಶಂಕರಾಚಾರ್ಯ, ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳಿಂದ ಸ್ವರ್ಣ ಕಿರೀಟ, ರಜತ ಸಿಂಹಾಸನದೊಂದಿಗೆ ಪಟ್ಟಾಭಿಷಿಕ್ತರಾದರು.

"ತಪ್ತ ಮುದ್ರಾಧಾರಣೆ" : ಅಂದರೆ ಶಿವಳ್ಳಿ ಮಾಧ್ವರು ಈ ಹಿಂದೆ ಮೂಲತಃ ಮೊಗವೀರರಾಗಿದ್ದವರು. ನಂತರ ಇವರನ್ನು ಪರಶುರಾಮನು ಅವರು ಮೀನು ಹಿಡಿಯುವ ಬಲೆಯನ್ನೇ ಜನಿವಾರವನ್ನಾಗಿ ಮಾಡಿ ಹಾಕಿ ಬ್ರಾಹ್ಮಣರನ್ನಾಗಿಸಿದ ಎಂದು ಇತಿಹಾಸದ ದಾಖಿಲೆಗಳಿಂದ ತಿಳಿದು ಬರುತ್ತದೆ. ಅಬ್ರಾಹ್ಮಣರಾಗಿದ್ದ ಇವರು ಪ್ರತೀ ವರ್ಷ ನಾಮ ಮುದ್ರೆಗಳನ್ನು ಕೆಂಡದಲ್ಲಿ ಕಾಯಿಸಿ ಬಿಸಿ ಅಚ್ಚು ಹಾಕಿಸಿಕೊಂಡು ಪವಿತ್ರರಾಗಲು ನಡೆಸುವ ವಿಧಾನವೇ "ತಪ್ತ ಮುದ್ರಾಧಾರಣೆ". ಇವರ ಸಂಘ ದೋಷದಿಂದ, ಇನ್ನೂ ಸೋದೆ ಮಠದ ಗಿಂಡಿ ಮಾಣಿಗಳಾಗಿರುವ ಸ್ವಾಭಿಮಾನವಿಲ್ಲದ ಕೆಲವು ದೈ.ಬ್ರಾ. ರೂ ಮಾಧ್ವರಿಂದ ಮುದ್ರೆ ಒತ್ತಿಸಿಕೊಂಡು ಬ್ರಾಹ್ಮಣತ್ವಕ್ಕೆ ಕಳಂಕ ತರುತ್ತಿದ್ದಾರೆ. ಜಾತ್ಯಾ ಪರಿಶುದ್ಧ ಬ್ರಾಹ್ಮಣರಾದ ದೈವಜ್ಞ ಬ್ರಾಹ್ಮಣರಿಗೆ ಇದು ನಿಷಿದ್ಧವಾಗಿದೆ.

——— ಉಡುಪಿಯಲ್ಲಿರುವುದು ಶ್ರೀಕೃಷ್ಣ ಪ್ರತಿಮೆಯಲ್ಲ?! ———

ದೇಶದ ಪ್ರಸಿದ್ಧ ಪ್ರಾಚ್ಯ ವಸ್ತು ಸಂಶೋಧಕ, ಇತಿಹಾಸ ತಜ್ಞರಾದ ಮಂಗಳೂರಿನ ಶ್ರೀ ಮಂಜೇಶ್ವರ ಮುಕುಂದ ಪ್ರಭುಗಳು "ತರಂಗ" ವಾರಪತ್ರಿಕೆಯಲ್ಲಿ ಎರಡು ಸಂಶೋಧನಾತ್ಮಕ ಲೇಖನಗಳನ್ನು ಬರೆದಿರುವರು 1. ಉಡುಪಿ ಕೃಷ್ಣ ಮೂರ್ತಿಯನ್ನು ಸ್ಥಾಪಿಸಿದ್ದು ಯಾರು? ಯಾವಾಗ? 15-9-1985. 2. ಉಡುಪಿ ಕೃಷ್ಣ ಪ್ರತಿಮೆ ಸ್ಕಂದ ವಿಗ್ರಹವೇ? 15-9-1986 (ತರಂಗ) ಎಂ.ಎಂ. ಪ್ರಭುಗಳು ದೇಶದ ಪ್ರಸಿದ್ಧ ಇತಿಹಾಸಕಾರರು, ಪ್ರಾಚ್ಯ ಸಂಶೋಧಕರು, ಚರಿತ್ರೆಕಾರರು, ಆಗಮ ತಜ್ಞರು, ಕೇಂದ್ರ

ಪುರಾತತ್ವ ಇಲಾಖೆಯ ದೆಹಲಿ, ಕಲ್ಕತ್ತಾ, ಪೂನಾ, ಮುಂಬೈ ಮ್ಯೂಸಿಯಂ ನಿರ್ದೇಶಕರಿಗೆ ಉಡುಪಿ ಕೃಷ್ಣನ ವಿವಿಧ ಚಿತ್ರಕಳಿಸಿ ಪ್ರತಿಮೆ ಬಗ್ಗೆ ಲೇಖನ ಆಹ್ವಾನಿಸಿದಾಗ ಅವರೆಲ್ಲರ ಏಕೈಕ ಅಭಿಪ್ರಾಯವೆಂದರೆ.....

ಅದು ಶ್ರೀ ಕೃಷ್ಣನ ಪ್ರತಿಮೆಯಲ್ಲ! ಸ್ಕಂದ ಸುಬ್ರಹ್ಮಣ್ಯನದ್ದು!! ಎಂದು.

ಗೋವಾರಾಜ್ಯದ ಪಡ್ಣೆ ತಾಲೂಖಿನ ಕೊರೆಗಾಂವ್‌ನಲ್ಲಿ ಇಂತದೇ ಇನ್ನೊಂದು ವಿಗ್ರಹವಿದೆ. ಇದು ಸ್ಕಂದನದ್ದು. ಇದು ಈಗ ಪಣಜಿಯ ವಸ್ತು ಸಂಗ್ರಹಾಲಯದಲ್ಲಿದೆ. ಇವೆರಡೂ ವಿಗ್ರಹಗಳು ಒಂದೇ ಕಾಲಮಾನದ್ದು, ಒಂದೇ ಎತ್ತರ, ರೂಪ ಇತ್ಯಾದಿ. ಬಲಗೈಯಲ್ಲಿ ಭಿನ್ನವಾದ ದಂಡವಿದೆ. (ಸ್ಕಂದನ ಕೈಯಲ್ಲಿರುವಂತೆ) ಎಡಗೈ ಸೊಂಟದ ಮೇಲಿದೆ. ಸೊಂಟದ ಸುತ್ತ ಹಗ್ಗವೊಂದನ್ನು ಇಳಿಬಿಡಲಾಗಿದೆ. ಈ ಮೂರ್ತಿಗಳಲ್ಲೊಂದನ್ನು ವಾದಿರಾಜರಿಗೆ ಗೋವೆಯ ಕೊಂಕಣಿಗರು ಕೊಟ್ಟಿರಬಹುದು ಎಂಬ ದಾಖಲೆ ವಾದಿರಾಜರ ತೀರ್ಥ ಪ್ರಬಂಧದಲ್ಲಿ ಕಂಡು ಬರುತ್ತದೆ. (ಕೈಯಲ್ಲಿರುವ ದಂಡವನ್ನು ಉಡುಪಿಯ ಸ್ವಾಮಿಗಳು ಬೆಣ್ಣೆ ಕಡೆಗೋಲು, ಇದು ಕೃಷ್ಣನ ಪ್ರತಿಮೆ ಎಂದು ಸಾಧಿಸಿದ್ದಾರೆ) ಆದುದರಿಂದ ಕೃಷ್ಣ ಪ್ರತಿಮೆಯನ್ನು ಮಧ್ವಾಚಾರ್ಯರು ಪ್ರತಿಷ್ಠಾಪಿಸಿದ್ದಲ್ಲ ಎಂದಾಯ್ತು. ಮಧ್ವಾಚಾರ್ಯರಿಂದ - ವಾದಿರಾಜರವರೆಗಿನ ಮುನ್ನೂರು ವರ್ಷಗಳ ಕಾಲದ ಮಧ್ಯೆ ಪೀಠಕ್ಕೆ ಬಂದ ಯಾವ ಅಷ್ಟಮಠಗಳ ಯತಿಗಳೂ ಈ ಕೃಷ್ಣ ಪ್ರತಿಮೆ ಬಗ್ಗೆ ತಮ್ಮ ಯಾವುದೇ ಗ್ರಂಥದಲ್ಲಿ ಉಲ್ಲೇಖಿಸಿಲ್ಲ, ಶ್ಲೋಕ, ಕೀರ್ತನೆ ಬರೆದಿಲ್ಲ. ಆದುದರಿಂದಲೇ ಶ್ರೀ ಕೃಷ್ಣಪ್ರತಿಮೆಯನ್ನು ವಾದಿರಾಜರೇ ಪ್ರತಿಷ್ಠೆ ಮಾಡಿದರೆಂದೂ ಈ ಸ್ಕಂದ [ಸುಬ್ರಹ್ಮಣ್ಯ]ನನ್ನು ಕೃಷ್ಣನನ್ನಾಗಿ ರೂಪಾಂತರಿಸಿ ಧ್ಯಾನ ಶ್ಲೋಕವನ್ನು ರಚಿಸಿದರೆಂದೂ ಮುಕುಂದ ಎಂ. ಪ್ರಭುಗಳು ಅನೇಕ ದಾಖಲೆಗಳೊಂದಿಗೆ ಈ ಲೇಖನನನ್ನು 'ತರಂಗ' ವಾರಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಉಡುಪಿ ಶ್ರೀಕೃಷ್ಣ ದೇವಾಲಯವಲ್ಲ, ಅದು "ಶ್ರೀಕೃಷ್ಣಮಠ" : ಹೀಗೆಂದು ಕರ್ನಾಟಕ ಸರಕಾರದ ಮುಜರಾಯಿ ಇಲಾಖೆಯ ದಾಖಲೆಗಳೇ ಸ್ಪಷ್ಟವಾಗಿ ಹೇಳುತ್ತವೆ. ನ್ಯಾಯಾಲಯವೇ ಇದು "ಅನಂತೇಶ್ವರ - ಚಂದ್ರಮೌಳೀಶ್ವರ ದೇವಸ್ಥಾನ ಹಾಗೂ ಶ್ರೀಕೃಷ್ಣ ದೇವರ ಮಠ" ಎಂದೇ ತೀರ್ಪು ನೀಡಿದೆ. ದ.ಕನ್ನಡ ಜಿಲ್ಲೆಯ ಯಾವ ಶಾಸನವೂ ಇದನ್ನು ದೇವಾಲಯವೆಂದು ಕರೆದಿಲ್ಲ (ವಿಜಯ ಕರ್ನಾಟಕ ಪತ್ರಿಕೆ - 2008)

______ ವಾದಿರಾಜರ ಪವಾಡವನ್ನು ತಿರಸ್ಕರಿಸುವ ಮಾಧ್ವರು!! ______

ಸೋದೆಯ ವಾದಿರಾಜರ ಪವಾಡ ಹಾಗೂ ಮಹಿಮೆಯನ್ನು ಇತರರು ಬಿಡಿ, ಸ್ವತಃ ಮಧ್ವರಾದ ಉತ್ತರಾದಿ ಮಠದವರೇ ಒಪ್ಪುವುದಿಲ್ಲ. ಈ ಮಠದ ಪಂಡಿತ ಮಾಹುಲಿ ವಿದ್ಯಾ ಸಿಂಹಾಚಾರ್ಯನು ಬರೆದ "ಶ್ರೀ ವಾದಿರಾಜ ಸ್ವರೂಪ ಚಿಂತನ "ಗ್ರಂಥದಲ್ಲಿ ಭಾವೀ ಸಮೀರ ಶ್ರೀ ವಾದಿರಾಜ ಸ್ವಾಮಿಗಳ ಋಜುತ್ವವನ್ನೇ ಹೀಯಾಳಿಸಿ ಪ್ರಶ್ನಿಸಿದ್ದಾರೆ. ಈ ವಿವಾದ ತಾರಕಕ್ಕೇರಿ ವಾದಿರಾಜ ಸೋದೆ ಮಠದ ವಿಶ್ವೋತ್ತಮ ತೀರ್ಥರು ಈ ಗ್ರಂಥ ಬರೆದ ಪಂಡಿತರಿಗೆ ತನ್ನ ಶಿಷ್ಯರಿಂದ ಹೊಡೆಸಿದ ಕಾರಣ ವಿವಾದ ಶಿರಸಿ ಪೊಲೀಸ್ ಠಾಣೆಯ ಮೆಟ್ಟಲೇರಿತ್ತು. ಉತ್ತರಾದಿ ಮಠದ ಶಿಷ್ಯರು ಇದನ್ನು ಪ್ರತಿಭಟಿಸಿ ಪ್ರವಚನಕಾರ ಡಾ. ಗುರುರಾಜ ನಿಪ್ಪಾಣಿ ಮೇಲೆ ಬಳ್ಳಾರಿಯಲ್ಲಿ ಹಲ್ಲೆ ನಡೆಸಿ ಸೋದೆ ಸ್ವಾಮಿಗಳ ಮೇಲೆ ಶಿರಸಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದಾಗ (6-4-2003 ವಿಜಯ ಕರ್ನಾಟಕ) ನಂತರ ಸೋದೆ ಸ್ವಾಮಿಗಳು 3-5-2003ರ ವಿಜಯ ಕರ್ನಾಟಕ ಪತ್ರಿಕೆ ಪ್ರಕಟಣೆ ಮೂಲಕ ಕ್ಷಮೆ ಬೇಡಿದ್ದರು. ಇಂದಿಗೂ ಉತ್ತರಾದಿ, ಕುಂಭಾಶಿ, ಕುಂಭಕೋಣ, ಮಂತ್ರಾಲಯ ಸೇರಿದಂತೆ ಅನೇಕ ಮಾಧ್ವ ಮಠಗಳು ಶ್ರೀ ವಾದಿರಾಜ ಸ್ವಾಮಿಗಳ ಮಹಿಮೆಯನ್ನು ಪವಾಡವನ್ನು ಒಪ್ಪುತ್ತಲೇ ಇಲ್ಲ. ಅಲ್ಲದೇ ಉತ್ತರಾದಿ ಮಠದ ಸ್ಥಾಪಕರು ಮಧ್ವಾಚಾರ್ಯರಲ್ಲ, ವಾದಿರಾಜರು ಎಂದು ವಾದಿಸುತ್ತಾರೆ.

______ ಸೋದೆ ಮಠದ ವಾದಿರಾಜ ಸ್ವಾಮಿಗಳ ನೈಜ ಸ್ವರೂಪವೇನು? ______

ಕುಂದಾಪುರ ಸಮೀಪದ ಹೂವಿನಕೆರೆಯಲ್ಲಿ ಜನಿಸಿದ ವಾದಿರಾಜರು ಸೋದೆ ಮಠದ 20ನೇ ಪ್ರ(ಕು)ಖ್ಯಾತ ಯತಿಗಳು (ಕ್ರಿ.ಶ.1480-1600). ಇವರು ತಮ್ಮ ಕಾಲದಲ್ಲಿ ಉಡುಪಿ, ಕುಂದಾಪುರ ಪರಿಸರದಲ್ಲಿ ಸಿಕ್ಕ ಸಿಕ್ಕ ಕೆಳವರ್ಗದ ಬಿಲ್ಲವರು, ಮೊಗವೀರರು, ಬಂಟರು/ಹೊಲೆಯರು ಮುಂತಾದ ಜಾತಿಯವರಿಗೆಲ್ಲಾ ತಪ್ತಮುದ್ರಾಧಾರಣೆ ಕ್ರಮದಿಂದ ಶುದ್ಧಗೊಳಿಸಿ ವೈಷ್ಣವ ದೀಕ್ಷೆ ನೀಡಿದ್ದರು. ಮೇಲ್ವರ್ಗದ ಸ್ಥಾನಿಕರು, ದೈ.ಬ್ರಾ. ಜೈನರಲ್ಲಿ ಕೆಲವರು ಇವರ ಮತಾಂತರಕ್ಕೊಳಗಾಗಿದ್ದಾರೆ. ವಾದಿರಾಜರು ತಾನು ಸಿದ್ಧಿಸಿಕೊಂಡ ಮಾಟ ಮಂತ್ರ ಹಾಗೂ ದುರ್ದೇವತೆಗಳ ಸಹಾಯದಿಂದ ಊರಿನ ಜನರನ್ನು ವಶೀಕರಣಗೊಳಿಸಿ, ಆಡಳಿತಗಾರರ ಸಹಾಯದಿಂದ ರಾಜಾಶ್ರಯ ಪಡೆದು ಉಡುಪಿಯ ಶೃಂಗೇರಿ ಮಠದ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣರ ಸ್ವಾಧೀನವಿದ್ದ

ಶ್ರೀ ಚಂದ್ರಮೌಳೀಶ್ವರ - ಅನಂತೇಶ್ವರ ದೇವಾಲಯವನ್ನೂ ಅದರ ಎರಡೂವರೆ ಎಕರೆ ಪ್ರದೇಶವನ್ನೂ ಸ್ವಾಧೀನ ಪಡಿಸಿಕೊಂಡು ಅಲ್ಲಿ ಪೂಜೆಗೆ ವೈಷ್ಣವರನ್ನು ನೇಮಿಸಿದರು. ತಾನು ಮತಾಂತರಿಸಿದ ಜಾತಿಯವರಿಗೆ ಎಂದಿಗೂ ಮಾಧ್ವರೊಂದಿಗೆ ಪಂಕ್ತಿ ಭೋಜನ ಕೊಡುತ್ತಿರಲಿಲ್ಲ. ಮೊಗವೀರರಾಗಿದ್ದ ಮಟ್ಟು ಗ್ರಾಮದವರು ಸಿಡಿದೆದ್ದಾಗ ಮಾಟ ಮಂತ್ರ ಮಾಡಿ ಅವರನ್ನು ಬಲಹೀನರನ್ನಾಗಿಸಿದ್ದರು. ಹಾಗೂ ಅನೇಕ ಸ್ಥಾನಿಕ ಬ್ರಾಹ್ಮಣರನ್ನು ಗುಪ್ತವಾಗಿ ವಾಮಾಚಾರ ಮಾಡಿ ಹತ್ಯೆ ಮಾಡಿದ್ದರು.

[1969ರಲ್ಲಿ ಡಾ|| ಅಚ್ಯುತ ಶರ್ಮಾ ಎಂಬ ಇತಿಹಾಸಕಾರರು ತಾವು ಸಂಗ್ರಹಿಸಿ ಪ್ರಕಟಿಸಿದ "ಉಡುಪಿ ಕ್ಷೇತ್ರದ ನೈಜ ಇತಿಹಾಸ" ಗ್ರಂಥದಲ್ಲಿ 17ನೇ ಪುಟದಲ್ಲಿ ಹೀಗೆ ರೋಚಕ ವಿವರಗಳು ಆಧಾರ ಸಹಿತ ದಾಖಲಾಗಿದೆ.]

"ಹೀಗಿದ್ದರೂ ಬ್ರಹ್ಮ ಹತ್ಯೆಗಳನ್ನು ಮಾಡಿದ ವಾದಿರಾಜ ಸ್ವಾಮಿಗಳನ್ನು ಅವರ ಪಾಪ ಬೆನ್ನು ಬಿಡಲಿಲ್ಲ. ಅದು ಬ್ರಹ್ಮ ರಾಕ್ಷಸನಾಗಿ ಬಂದು ಅವರನ್ನು ದಿನವೂ ಹಿಂಸಿಸತೊಡಗಿತು. ಅದರಿಂದ ಅವರು ತುಂಬಾ ಕಷ್ಟಪಟ್ಟರು. ಆ ಬ್ರಹ್ಮ ರಾಕ್ಷಸನನ್ನು ತೃಪ್ತಿಪಡಿಸುವುದಕ್ಕೆ ನಿತ್ಯ ಒಂದು ತಟ್ಟೆ ನೈವೇದ್ಯವನ್ನು ತನ್ನ ತಲೆಯಲ್ಲಿಟ್ಟು ಅದಕ್ಕೆ ತೃಪ್ತಿ ಪಡಿಸುತ್ತಿದ್ದರು. ಈ ಗುಟ್ಟು ಇತರರಿಗೆ ತಿಳಿಯದಂತೆ ಹಯಗ್ರೀವನು ಇವರ ಭಕ್ತಿಗೆ ಮೆಚ್ಚಿ ನಿತ್ಯವೂ ಬಿಳಿಕುದುರೆ ರೂಪದಿಂದ ಇವರ ಬೆನ್ನ ಹಿಂದೆ ಹೆಗಲ ಮೇಲೆ ಮುಂಗಾಲು ಇಟ್ಟು ಮೆಲ್ಲುತ್ತಾನೆಂದೂ, ಬ್ರಹ್ಮ ರಾಕ್ಷಸನು ಭೂತರಾಜನಾಗಿ ತನ್ನ ಸೇವೆ ಮಾಡುವನೆಂದೂ ಕಥೆಕಟ್ಟಿ ಜನರನ್ನು, ಅಜ್ಞಾನಿ ಭಕ್ತರನ್ನು ಆಶ್ಚರ್ಯಪಡುವಂತೆ ಮಾಡಿದ್ದರು. [ನಾವು ದೇವರಿಗೆ ಮಾತ್ರ ನೈವೇದ್ಯವನ್ನು ಎದುರಿಗಿಡುವುದು. ಭೂತ ಪ್ರೇತ, ವಶೀಕರಿಸಿಕೊಂಡ ದುಷ್ಟ ಶಕ್ತಿಗಳು ಮಾತ್ರ ಬೆನ್ನ ಹಿಂದೆ ಬಂದು ಬೆನ್ನಿಗೆ ಬಡಿಯುತ್ತದೆ. ನಮ್ಮ ಕಣ್ಣಿಗೆ ಬೀಳದೇ ತನಗಿಟ್ಟ ಆಹಾರವನ್ನು ತಿಂದು ಹೋಗುತ್ತದೆ.]

ಅಂತೂ ಕಡೆಗೆ ಊರಿನ ಜನರು ಇವರು ಮಾಡಿದ ಹಿಂಸಾಚಾರ, ಅಥರ್ವಣ ತಂತ್ರ - ಮಾಟ, ಅನ್ಯಾಯಗಳನ್ನು ಅರಿತುಕೊಂಡು ಹೆಚ್ಚಿನ ಎಲ್ಲಾ ಮತದವರು ಒಟ್ಟುಗೂಡಿ ವಾದಿರಾಜರನ್ನು ಉಡುಪಿಯಿಂದಲೇ ಓಡಿಸಿದರು. ತಮ್ಮ ಐದನೇ ಪರ್ಯಾಯವನ್ನು ಉಡುಪಿಯಲ್ಲಿ ಮಾಡಲೂ ಬಿಡಲಿಲ್ಲ ಜನರು. ಇವರು ಇಲ್ಲಿ ನಿಲ್ಲಲಾರದೇ ತನ್ನ ಮೂಲ ಊರಾದ ಶಿರಸಿ ಬಳಿಯ ಸೋದೆ ಎಂಬಲ್ಲಿಗೆ ಹೋಗಿ ಅಲ್ಲಿ ತನ್ನ ಅಂತ್ಯವನ್ನು ಭೂತರಾಜನನ್ನು ತೃಪ್ತಿಪಡಿಸುತ್ತಾ ಬಹಳ ಕಷ್ಟದಿಂದ ಕಳೆದರೆಂದು ಶಿರಸಿ ಅರಸ ಪ್ರಾಂತ್ಯದ ಹಳೇ ತಾಡವಾಲಗಳ ದಾಖಲೆಯಿಂದ ತಿಳಿದು ಬರುತ್ತದೆ.

——— ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ ವಶಕ್ಕೆ ಯತ್ನ; ಕಾಣೆಯಾದ ಗಣಪತಿ ಗುಡಿ!! ———

ಶೈವಾಗಮ ಸಂಪ್ರದಾಯದ ದಕ್ಷಿಣ ಕನ್ನಡದ ಪುರಾತನ ಪೌರಾಣಿಕ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ 165 ವರ್ಷಗಳ ಹಿಂದೆ ಈ ತುಳು ಮಾಧ್ವ ವೈಷ್ಣವ ಬ್ರಾಹ್ಮಣರ ಕೈವಶವಾಗಿ ಅಲ್ಲಿ ಗರ್ಭಗುಡಿಯಲ್ಲಿ ಪ್ರಧಾನವಾಗಿದ್ದ ಶಿವಪುತ್ರ ಕುಮಾರ (ಸ್ಕಂದ)ನಿಂದ ಪ್ರತಿಷ್ಠಾಪಿಸಲ್ಪಟ್ಟ ಶಿವಲಿಂಗವು ಮಧ್ವರಿಂದ ಮೂಲೆಗೆಸೆಯಲ್ಪಟ್ಟು, ಬಲಭಾಗದಲ್ಲಿದ್ದ ಶ್ರೀ ಸಿದ್ಧಿವಿನಾಯಕ ದೇವರ ಮೂರ್ತಿಯನ್ನು ಬಲಾತ್ಕಾರ, ಮೋಸದಿಂದ ಕಿತ್ತು ಅಲ್ಲಿ ನರಸಿಂಹಮೂರ್ತಿ, ಸಾಲಿಗ್ರಾಮ ಇಟ್ಟು ಅದನ್ನು ಹೊಸದಾಗಿ **"ಸಂಪುಟ ನರಸಿಂಹ"** ಮಠವನ್ನಾಗಿ ಕ್ರಿ.ಶ. 1847ರಲ್ಲಿ ಮಾಡಿರುವರು. ಸುಬ್ರಹ್ಮಣ್ಯ ದೇವರ ಪಾಕಶಾಲೆ ಕಬಳಿಸಿ ಹನುಮಂತನ ಗುಡಿ ಮಾಡಿದ್ದಾರೆ.

ಕುಕ್ಕೆ ಶಿವಲಿಂಗವನ್ನು ತೆಗೆದು, ಸುಬ್ರಹ್ಮಣ್ಯ ದೇವರ ಗುಡಿಯ ಇಡೀ ಪೌಳಿಯನ್ನು ಆಗ ಮೈಸೂರಿನ ರಾಜಮನೆತನದ ದಿವಾನರಾಗಿದ್ದ ಕಡು ಮಾಧ್ವಮಂತ್ರಿ ದಿವಾನ್ ಪೂರ್ಣಯ್ಯನವರ ಬೆಂಬಲದೊಂದಿಗೆ ಆಕ್ರಮಿಸಿ ಶೃಂಗೇರಿಯ ಶಿಷ್ಯರಾಗಿದ್ದ ಸ್ಥಾನಿಕ ಸ್ಮಾರ್ತ ಬ್ರಾಹ್ಮಣರನ್ನು ಪೌರೋಹಿತ್ಯ, ಆಡಳಿತ ಮೊಕ್ತೇಸರ (ಹೆಬ್ಬಾರ) ಕೆಲಸದಿಂದ ಓಡಿಸಿ, ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರವನ್ನು ನುಂಗಿ ಬಿಟ್ಟಿದ್ದಾರೆ. (ಅಪೀಲ್ ನಂ. 279/1876) ಮಾಧ್ವರು ಕಾಣೆ ಮಾಡಿದ ಗಣಪತಿ ಮೂರ್ತಿಯ ಚಿನ್ನದ ಕವಚ ಈಗಲೂ ಕುಕ್ಕೆ ದೇವಾಲಯದ ಟ್ರೆಜರಿಯಲ್ಲಿ ಬಿದ್ದುಕೊಂಡಿದೆ. (O.S. No. 5, 1886ನೇ ವ್ಯಾಜ್ಯ, ಮಂಗಳೂರು ಸಬ್‌ಕೋರ್ಟು)

ಈ ಶಿವಳ್ಳಿ ಮಾಧ್ವರು ಕುಕ್ಕೆ ಕ್ಷೇತ್ರದಲ್ಲಿ ಗಣಪತಿ ಮೂರ್ತಿ, ಮೂಲ ಶಿವಲಿಂಗ ಈ ಹಿಂದೆ ಇರಲೇ ಇಲ್ಲ ಎಂದು ವಾದಿಸುತ್ತಾರೆ. ಆದರೆ... 8ನೇ ಶತಮಾನದಲ್ಲಿ ಶ್ರೀ ಆದಿ ಶಂಕರಾಚಾರ್ಯರು ಕ್ಷೇತ್ರಕ್ಕೆ ಭೇಟಿ ನೀಡಿದಾಗ ರಚಿಸಿದ ಪ್ರಸಿದ್ಧ ಶ್ರೀ ಸುಬ್ರಹ್ಮಣ್ಯ ಭುಜಂಗ ಪ್ರಯಾತ ಸ್ತೋತ್ರದ 15ನೇ ಚರಣದಲ್ಲಿ "ಭರ್ಜೇಕುಕ್ಕೆ ಲಿಂಗಂ" ಎಂದೂ 30ನೇ ಚರಣದಲ್ಲಿ "ನಮಃ ಕುಕ್ಕೆ ಲಿಂಗಾಯ ತಸ್ಮೈ ನಮಃ" ಎಂದು ಸ್ತುತಿಸಿದ್ದಾರೆ. ಶ್ರೀ ಶಂಕರಾಚಾರ್ಯರ ಭೇಟಿಗೆ ಸಾಕ್ಷಿಯಾಗಿ ಶೃಂಗೇರಿ ಮಠದ ಶಾಖೆಯೂ ಇಲ್ಲಿದೆ. 19ನೇ ಶತಮಾನದಲ್ಲಿ ಕುಕ್ಕೆ ಸುಬ್ರಹ್ಮಣ್ಯ ಮೂರ್ತಿ ತೆಗೆಯಲು ಹೋದ ನರಸಿಂಹ ಮಠದ ಯತಿಗಳಾದ ವರದರಾಜ

ಸ್ವಾಮಿ, ನಂತರದ ವಿದ್ಯಾರಾಜ ತೀರ್ಥ ಸ್ವಾಮಿಗಳು ನಿಗೂಢ ರೋಗಕ್ಕೆ ತುತ್ತಾಗಿ ಕುಮಾರ ಪರ್ವತದಲ್ಲಿ, ಇನ್ನೊಬ್ಬರು ಮಾನಸಿಕ ರೋಗಿಯಾಗಿ ಉಡುಪಿಗೆ ಓಡಿ ಬಂದು ಮಲ್ಪೆಯಲ್ಲಿ ತೀರಿಕೊಂಡಿದ್ದರು. 1892ರಿಂದ 1899ರ ವರೆಗೆ ಮಾಧ್ವಸ್ವಾಮಿಗಳಾಗಿದ್ದ ಶ್ರೀ ವ್ಯಾಸ ತೀರ್ಥರು ಸೋದೆ ವಾದಿರಾಜ ಮಠದಿಂದ ನಿಯುಕ್ತಿಗೊಂಡಿದ್ದರು. ಇವರ ಕಾಲವು ದುರಾಢಳಿತಕ್ಕೆ ಕುಖ್ಯಾತವಾಗಿತ್ತು. C.C. ನಂಬ್ರ 70-1898ರ ಪ್ರಕಾರ ಇವರ ಮೇಲೆ ದೇವರ ಆಭರಣ ಕಳ್ಳತನ, ದೇವಸ್ಥಾನ ಪ್ರಾಂಗಣದೊಳಗೆ ಹೆಬ್ಬಾರರ ಕೊಲೆ ಆರೋಪಿಯಾಗಿ ಕೇಸು ದಾಖಲಾಗಿತ್ತು. ಹಲವಾರು ಅವೈದಿಕ, ಅನಾಚಾರದ ಪರಂಪರೆಗಳನ್ನು ರೂಢಿಸಿ ದೇವಸ್ಥಾನಕ್ಕೆ ಕಳಂಕ ತಂದ ಸೋದೆ ವಾದಿರಾಜ ಮಠದ ಶಿಷ್ಯ ವ್ಯಾಸ ತೀರ್ಥರು ಕಟ್ಟಕಡೆಗೆ ಮೈಯೆಲ್ಲಾ ಬೊಕ್ಕೆ ಕಜ್ಜಿ ತಗುಲಿಕೊಂಡು 1906 ಡಿಸೆಂಬರ್ ತಿಂಗಳಲ್ಲಿ ಕಾಸರಗೋಡು ಕಣ್ವತೀರ್ಥ ಸಮುದ್ರ ತೀರದಲ್ಲಿ ಚಿತ್ತಭ್ರಮಾಧೀನರಾಗಿ ಕಾಲವಾದರು. [ಮಾಹಿತಿ ಸಂಗ್ರಹ : ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದ ಸಂಶೋಧನಾತ್ಮಕ ಇತಿಹಾಸ, ಡಾ|| ಯಂ.ಎಸ್. ಅಚ್ಯುತ ಶರ್ಮಾ, ಕ್ಷೇತ್ರದ ಮಾಜಿ ಧರ್ಮದರ್ಶಿ - 1953]

ಶ್ರೀ ಮಧ್ವಾಚಾರ್ಯರು ಮೂಲತಃ ಸ್ಮಾರ್ಥರೂ, ಅದ್ವೈತಿಗಳೂ ಆದ ಶ್ರೀ ಅಚ್ಯುತ ಪ್ರೇಕ್ಷಾಚಾರ್ಯರಲ್ಲಿ ಶಿಷ್ಯರಾಗಿದ್ದರು. ಇವರ ಗುರುಗಳು ಹಸ್ತಾಮಲಕರು, ಹಸ್ತಾಮಲಕರು ಶ್ರೀ ಆದಿಶಂಕರಾಚಾರ್ಯರ ನೇರ ಶಿಷ್ಯರು. ತುಳುನಾಡಿನಲ್ಲಿ ಶಿವ ಮತ್ತು ದುರ್ಗೆಯ ದೇವಾಲಯಗಳು ಅತ್ಯಧಿಕವಾಗಿದ್ದು, ಪೂರ್ವಜರ, ಭೂತದೈವಗಳ ಆರಾಧನೆ ಬಿಟ್ಟರೆ ದೇವಸ್ಥಾನಗಳಲ್ಲಿ ನಡೆಯುತ್ತಿದ್ದುದು ಶಿವ ಹಾಗೂ ಶಕ್ತಿ ಆರಾಧನೆ ಮಾತ್ರ. ತುಳು ಸಂಸ್ಕಾರದ ಮಧ್ವ ಬ್ರಾಹ್ಮಣರು ವೈಷ್ಣವಾರಾಧನೆಯನ್ನು ಅಳವಡಿಸಿಕೊಂಡಿದ್ದು 12ನೇ ಶತಮಾನದ ಅಂತ್ಯದಲ್ಲಿ (ಆಧಾರ; ಕ್ರಿ.ಶ. 1401ರ ಪಾಲಿಮಾರು ಶಾಸನ, 1307ರ ಬಾರಕೂರು ಶಾಸನ, 1586ರ ಕಾರ್ಕಳದ ಚತುರ್ಮುಖ ಬಸದಿಯ ಶಾಸನ ಮತ್ತು 1469ರ ಎರಡನೇ ಬುಕ್ಕರಾಯನ ತಾಮ್ರ ಶಾಸನ)- ಡಾ|| ಕೆ.ಪಿ. ವಸಂತ ಮಾಧವ, ಇತಿಹಾಸಕಾರರು) ಮಧ್ವಾಚಾರ್ಯರು ಭೋಧಿಸಿದ "ಹರಿಸರ್ವೋತ್ತಮ" ವೈಷ್ಣವ ದ್ವೈತ ತತ್ವ ದೇಶದ ಇತರೆಡೆ ಸ್ವೀಕೃತಿ ಪಡೆಯುವಲ್ಲಿ ವೈಫಲ್ಯ ಕಂಡರೂ, ಅವರ ಶಿಷ್ಯ ವರ್ಗದ ಆಕ್ರಮಣಕಾರಿ, ತಂತ್ರ - ಮಾಟ ಸಂಘಟಿತ ಮತ ಪ್ರಚಾರದಿಂದ **14ನೇ ಶತಮಾನದ ನಂತರ ತುಳುನಾಡಿನಲ್ಲಿ ಕ್ರಮೇಣ ಬೇರೂರಿತು. ಮೊದಲು ಶಿವ ಬ್ರಾಹ್ಮಣರು, ನಂತರ ಗೌಡ ಸಾರಸ್ವತ ಬ್ರಾಹ್ಮಣರು ತಪ್ತ ಮುದ್ರಾಧಾರಣೆ ಮಾಡಿಸಿಕೊಂಡು ಮಾಧ್ವ ಪರಂಪರೆಯನ್ನು ಸ್ವೀಕಾರಮಾಡಿದರು. ಮೋಸದ ಕಾರಣದಿಂದ ಕೋಟ ಬ್ರಾಹ್ಮಣರಿಂದ ಬಹಿಷ್ಕರಿಸಲ್ಪಟ್ಟ ಕೋಟೇಶ್ವರ ಬ್ರಾಹ್ಮಣರನ್ನು ಮಾಧ್ವರಾಗಿ ಮತಾಂತರಿಸಲಾಯಿತು.** ನಂತರ ಜೈನರು, ಕಸಗುಡಿಸುವ ಪಾಟಾಳಿಗಳು, ಮೀನು ಹಿಡಿಯುವ ಮಟ್ಟಿ ಬ್ರಾಹ್ಮಣರು ಮಾಧ್ವರಿಂದ ವೈಷ್ಣವ ದೀಕ್ಷೆ ಪಡೆದರು. ದೇವಾಲಯಗಳೂ ಮತಾಂತರಕ್ಕೊಳಗಾಗಿ ನಾಥ ಪಂಥದವರ ಆಲಯ ಕೃಷ್ಣ ದೇವಾಲಯವಾಯ್ತು. ಹಲವಾರು ಶಿವ ದೇವಸ್ಥಾನಗಳು "ಶಂಕರ ನಾರಾಯಣ" ದೇವಸ್ಥಾನಗಳಾದವು. ನಾಗನ ಗುಡಿಗಳು ಅನಂತ ಶಯನ - ಪದ್ಮನಾಭ ದೇವಾಲಯವಾದವು. ಚಂದ್ರಮೌಳೀಶ್ವರನ ಜಾಗ ಅಷ್ಟಮಠಗಳು ಮಾಧ್ವರ ಪಾಲಾಯಿತು. ಜೈನರ ಜಿನ ದೇವಾಲಯಗಳು 'ಜನಾರ್ಧನ ದೇವಾಲಯವಾದವು. ಶಕ್ತಿ ದೇವತೆ ಲಕ್ಷ್ಮೀಯಾದಳು. ಶಿಲ್ಪ ಲಕ್ಷಣಗಳ ಪರೀಕ್ಷೆಯಿಂದ ಉಡುಪಿ, ಕಾರ್ಕಳ ಹಾಗೂ ಮಂಜೇಶ್ವರದ ಅನಂತ ಪದ್ಮನಾಭ ದೇವಾಲಯಗಳು ಹಿಂದೆ ಬೌದ್ಧ ವಿಹಾರಗಳಾಗಿದ್ದವು ಎಂದು ತಿಳಿದು ಬರುತ್ತದೆ. (ಮಾಹಿತಿ : ರಾಷ್ಟ್ರಕವಿ ಗೋವಿಂದ ಪೈಗಳ "ಶಾಸನಾಧಾರ ಇತಿಹಾಸಗಳು")

——— ಕೆಲವು ಉತ್ತರವಿಲ್ಲದ ಪ್ರಶ್ನೆಗಳು!! ———

1. ಮಧ್ವಾಚಾರ್ಯರು ತಮ್ಮ ಕೊನೆಯ ದಿನಗಳಲ್ಲಿ ಉಡುಪಿಯಿಂದ ಏಕಾಕಿಯಾಗಿ ಬದರಿಗೆ ಹೊರಟದ್ದೇಕೆ? (ಉಡುಪಿಯವರು ಶ್ರೀ ಮಧ್ವಾಚಾರ್ಯರು ಅನಂತೇಶ್ವರ ದೇವಾಲಯದ ಜಗಲಿಯಲ್ಲಿ ಅದೃಶ್ಯರಾದರು ಎಂದು ಕಥೆ ಕಟ್ಟುತ್ತಾರೆ. ಇದು ಶುದ್ಧ ಕಾಲ್ಪನಿಕ ಕಥೆಯಾಗಿದೆ)
2. ಉಡುಪಿಯ ದಾನಿ, ರಾಷ್ಟ್ರೀಕೃತ ಬ್ಯಾಂಕ್‌ನ ಸ್ಥಾಪಕ ಹಾಜಿ ಅಬ್ದುಲ್ಲಾ ಸಾಹೇಬರು ಅಷ್ಟಮಠದ ಯಾವ ಸ್ವಾಮಿಯ ಸಂಪರ್ಕದಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡಿದ್ದೇಕೆ?
3. ಉಡುಪಿಗೆ ಬಂದ ಮಹಾತ್ಮಗಾಂಧಿಯವರು ಶ್ರೀ ಕೃಷ್ಣ ಮಠಕ್ಕೆ ಏಕೆ ಭೇಟಿ ನೀಡಲಿಲ್ಲ?
4. ಉಡುಪಿಯ ಖ್ಯಾತ ಲೇಖಕಿ ಸರಸ್ವತಿ ಬಾಯಿ ತನ್ನ ಆತ್ಮಕಥೆಯಲ್ಲಿ ಏನೇನು ಬರೆದಿದ್ದರು??
(ಪುಟ ಸಂಖ್ಯೆ 311, ಶಿವಳ್ಳಿ ಬ್ರಾಹ್ಮಣರು ಭಾಗ - 1)

ಹಿಂದಿನಿಂದಲೂ ನಮ್ಮ ದೈ.ಬ್ರಾ. ಸಮಾಜದ ಬಗ್ಗೆ ಸೋದೆ ವಾದಿರಾಜ ಮಠದವರಿಗೆ ಯಾವುದೇ ಪ್ರೀತಿ, ಮಮತೆ ಕಾಳಜಿ ಇರಲಿಲ್ಲ. ಅವರ ಮಠದ ಆಡಂಬರ, ವೈಭವಗಳನ್ನು ಮೆರೆಸಲು ಮಾತ್ರ ನಾವು ಬೇಕು, ನಮ್ಮ ಧನ ಕನಕ ಬೇಕು. ಜಾತ್ಯಾ ಬ್ರಾಹ್ಮಣರಾಗಿದ್ದ ನಮ್ಮನು ಸಸಾರ ಭಾವದಿಂದ ನೋಡಿಕೊಂಡರು. ಅವರ ಸಭೆ, ಸಮಾರಂಭಗಳಲ್ಲಿ ನಮ್ಮಿಂದ ಘೋಷಣೆ ಹಾಕಿಸಿ, ರಜತಪೀಠ, ರಜತ ರಥ - ಪಾಲಕಿ, ಹೂವಿನ ಕೆರೆ, ಉಡುಪಿ, ಸೋದೆಯಲ್ಲಿ ನಮ್ಮ ಹಣದಿಂದ ಗೋಪುರ, ದ್ವಾರ ಕಟ್ಟಿಸಿ ಮೆರೆದರು. ಆದರೂ ನಮಗೆ ಸಿಕ್ಕಿದ್ದು ಅವರು ದೂರದಿಂದ ಬಿಸಾಡಿದ ಮಂತ್ರಾಕ್ಷತೆ ಕಾಳು! ಬೆಸ್ತ ಜಾತಿಯ ಸೋದೆ ಮಠದ ಗುಲಾಮರಾಗಿರುವ "ಗಿಂಡಿಮಾಣಿ"ಗಳು ನಿಮ್ಮ ಮನೆ ಬಾಗಿಲಿಗೆ ಬಂದರೆ ಉಡುಪಿ ಮಧ್ವ ವೈಷ್ಣವರು ನಮಗೆ ಮಾಡಿದ ಈ ಅನ್ಯಾಯದ ಬಗ್ಗೆ ಕೇಳಿ ತಿಳಿಯಿರಿ;

1. ಜಾತ್ಯಾ ಪರಿಶುದ್ಧ ಬ್ರಾಹ್ಮಣರಾದ ದೈವಜ್ಞರನ್ನು ಅಬ್ರಾಹ್ಮಣರು, ಅನ್ಯ ಪಂಗಡದವರು ಎಂದು ಕರೆದು ಅವಮಾನಿಸಿದ್ದು ಸರಿಯೇ?

2. ನಾವು ಬ್ರಾಹ್ಮಣರಾಗಿದ್ದರೂ ಉಡುಪಿ ಮಠದಲ್ಲಿ ಅವರ ಸಮಾನ ಪಂಕ್ತಿಯಲ್ಲಿ ನಮ್ಮನ್ನು ಕೂರಿಸುವುದಿಲ್ಲ. ಅಂದಿನಿಂದ ಇಂದಿನವರೆಗೂ ಪಂಕ್ತಿ ಭೇದ ಮಾಡುತ್ತಲೇ ಇದ್ದಾರೆ. ಇತ್ತೀಚೆಗೆ 2011 ಆಗೋಸ್ಟ್‌ನಲ್ಲಿ ಸೋದೆ ಮಠದಲ್ಲಿ ಊಟಕೆ ಕುಳಿತ ಕುಂದಾಪುರದ ದೈ.ಬ್ರಾ. ಸಮಾಜದ ಕೆಲವು ದಂಪತಿಗಳಿಗೆ ಇತರ ಮಾಧ್ವ ದಂಪತಿಗಳಿಗೆ ನೀಡಿದ ಸೀರೆ, ಪಂಚೆ ಮುಂತಾದ ಮಂಗಳ ದ್ರವ್ಯಗಳನ್ನು ನೀಡಲು ನಿರಾಕರಿಸಿ ಅವಮಾನಿಸಿದ್ದು ಸರಿಯೇ? ಸೋದೆ ವಾದಿರಾಜ ಮಠದ ಮುಖ್ಯ ಶಿಷ್ಯರಿಗೆ ಸಿಗುವ ಗೌರವ ಇಷ್ಟೇನಾ? ಮುಖ್ಯ ಶಿಷ್ಯರು..... ಮುಖ್ಯ ಶಿಷ್ಯರು ಎಂದು ನಾವೇ ಬಾಯಿ ಬಡಿದುಕೊಂಡು ಅವರಿಗೆ ಉದ್ದಂಡ ನಮಸ್ಕಾರ ಹಾಕಿದರೂ, ಡ್ಯಾನ್ಸ್ ಮಾಡಿದರೂ ನಮ್ಮನ್ನು ಎಲ್ಲಿ ಇಡಬೇಕೋ, ಅಲ್ಲೇ ಇಡುತ್ತಾರೆ ಈ ಮಾಧ್ವರು. ಇಷ್ಟಾದರೂ ಅಲ್ಲಿ ಹೋಗಿ ಊಟ ಮಾಡಿ ಬರುವವರಿಗೆ ಸ್ವಾಭಿಮಾನವಿಲ್ಲ ಅಷ್ಟೆ!

3. ಜ್ಯೋತಿಷ್ಯ ಪ್ರಕಾರ ಗುರು - ಶುಕ್ರ ಅಸ್ತವಾಗಿರುವಾಗ ದೈವಜ್ಞ ಬ್ರಾಹ್ಮಣರಿಗೆ ಮದುವೆ, ಬ್ರಹ್ಮೋಪದೇಶ, ಗೃಹಪ್ರವೇಶದಂತಹಾ ಶುಭ ಕಾರ್ಯಗಳನ್ನು ಮಾಡಿಸಲು ಮಾಧ್ವರು ಪ್ರೇರೇಪಿಸಿದ್ದು, ಮಾಡಿಸಿದ್ದು ಸರಿಯೇ?

4. 450 ವರ್ಷಗಳಾದರೂ ಸೋದೆ ಮಠದವರು ದೈವಜ್ಞರಿಗಾಗಿ ವಿಶೇಷವಾದ ಧಾರ್ಮಿಕ ಕಾರ್ಯಕ್ರಮವನ್ನು ಎಂದಾದರೂ ಹಮ್ಮಿಕೊಂಡಿದ್ದಾರೆಯೇ? ನಮ್ಮಿಂದ ಕಾಲಕಾಲಕ್ಕೆ ಚಿನ್ನ-ಬೆಳ್ಳಿ-ಹಣವನ್ನು ವಸೂಲು ಮಾಡುವುದು ಗೊತ್ತು. ಇಲ್ಲಿವರೆಗೂ ಸಾಮಾನ್ಯ ಒಬ್ಬ ದೈವಜ್ಞ ಬ್ರಾಹ್ಮಣನ ಮನೆಗೆ ಬಂದು ಸೋದೆ ಸ್ವಾಮಿಗಳು ಎಂದಾದರೂ ಭಿಕ್ಷೆ ಪಡೆದಿಲ್ಲ ಯಾಕೆ? ನಾವು ಅನ್ಯ ಪಂಗಡದವರೆಂಬ ತಾತ್ಸಾರವಿರಬಹುದು. ಅಲ್ಲವೇ?

5. ಯಜ್ಞ ಯಾಗ, ಪೌರೋಹಿತ್ಯ ಮಾಡಿ ಸ್ವತಃ ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಜಾತ್ಯಾ ಬ್ರಾಹ್ಮಣರಾದ ದೈವಜ್ಞರಿಗೆ ಭೂತಾರಾಧನೆ, ಬಲಿಗೆ ಪ್ರಚೋದಿಸಿದ್ದು ಸರಿಯೇ?

6. ಸಮಸ್ತ ದೈವಜ್ಞ ಬ್ರಾಹ್ಮಣರ ಕುಲದೇವತೆಗಳಾದ ಸೋಮನಾಥೇಶ್ವರ, ವಿಮಲೇಶ್ವರ, ಕಾಮಾಕ್ಷಿ, ಶಾಂತಾದುರ್ಗಾ ಮುಂತಾದ ಶಿವ-ಶಕ್ತಿ ದೇವತೆ, ದೇವಾಲಯಗಳು ಸಹಸ್ರಾರು ವರ್ಷಗಳಿಂದ ಗೋವಾದಲ್ಲಿರುವಾಗ, 15ನೇ ಶತಮಾನದಲ್ಲಿ ದಿಢೀರ್ ಸೃಷ್ಟಿಸಿದ ಹಯಗ್ರೀವ ಮೂರ್ತಿಯನ್ನು ದೈ.ಬ್ರಾ.ರ ಕುಲದೇವರು ಎಂದು ಒಪ್ಪಿಕೊಳ್ಳಲು ಸಾಧ್ಯವೇ? ಸರಿಯೇ?

7. ದೈವಜ್ಞನೊಬ್ಬ ಗಣಪತಿ ಮೂರ್ತಿ ಮಾಡಲು ಹೋದಾಗ ಅದು ಕುದುರೆ ಮುಖದ ಹಯಗ್ರೀವ ಮೂರ್ತಿಯಾಯಿತು ಎಂಬ ಕಟ್ಟು ಕಥೆ ಇದೆ. ಹಾಗಾದರೆ ದೈವಜ್ಞ ಸಮಾಜಕ್ಕೆ ಗಣಪತಿ ದೇವರ ಕೃಪೆ ಇಲ್ಲ ಎಂದು ಒಪ್ಪಿಕೊಳ್ಳುವಿರಾ? ಹಿರಿಯರು ಪೂರ್ವಿಕರಿಂದ ನಡೆಸಿಕೊಂಡು ಬಂದ ಚೌತಿ ಗಣಪತಿ ಪೂಜೆ ನಿಷ್ಪ್ರಯೋಜಕ ಎಂದು ಮಾನ್ಯ ಮಾಡುವಿರಾ?

8. ದೈ.ಬ್ರಾ.ನೊಬ್ಬ ಮೂರ್ತಿಯನ್ನು ಮಾಡಿ ವಾದಿರಾಜರಿಗೆ ಕೊಟ್ಟ ಮಾತ್ರಕ್ಕೆ ಅವರ ಶಿಷ್ಯ ಆಗುವುದಾದರೆ, ನಾವು ಗ್ರಾಹಕರಿಗೆ ಮಾಂಗಲ್ಯ ಸೂತ್ರ ಮಾಡಿಕೊಟ್ಟ ಮಾತ್ರಕ್ಕೆ 'ಸಂಬಂಧ' ಕಲ್ಪಿಸುವುದು ನ್ಯಾಯವೇ?

9. ಹಯಗ್ರೀವ ದೈವಜ್ಞರ ಕುಲದೇವರು ಎಂದು ನೀವು ಹೇಳುವುದಾದರೆ ನಮ್ಮ ಪೂರ್ವಜರ್‍ಯಾರೂ ಒಂದೇ ಒಂದು ಹಯಗ್ರೀವ ದೇವರ ದೇವಸ್ಥಾನ, ಗುಡಿಕಟ್ಟಿಸಿ ಪ್ರತಿಷ್ಠಾಪನೆ ಯಾಕೆ ಮಾಡಲಿಲ್ಲ?

10. ದೇಶದ ಸಾಮಾಜಿಕ ಇತಿಹಾಸದ ಪ್ರಕಾರ ಪೋರ್ಚುಗೀಸರು ಭಾರತಕ್ಕೆ ಬಂದಿದ್ದು 16ನೇ ಶತಮಾನದ ಪ್ರಾರಂಭದಲ್ಲಿ, ವಾದಿರಾಜರು ಮರಣ ಹೊಂದಿದ್ದು 16ನೇ ಶತಮಾನದ ಅಂತ್ಯದಲ್ಲಿ (ಕ್ರಿ.ಶ.1600), ಪೋರ್ಚುಗೀಸರು ಪ್ರಬಲರಾಗಿ

ಗೋವಾ ಆಡಳಿತ ಕೈವಶ ಮಾಡಿಕೊಂಡು ಹಿಂದೂಗಳ ಮೇಲೆ ಮತಾಂತರ ವಿಗ್ರಹ, ದೇವಸ್ಥಾನ ಭಂಜನೆ, ಮುಂತಾದ ದೌರ್ಜನ್ಯವೆಸಗಲು ಪ್ರಾರಂಭಿಸಿದ್ದು 17ನೇ ಶತಮಾನದ ಆದಿಯಲ್ಲಿ. (ಆಧಾರ : GOA Inquisition.)

ದೈ.ಬ್ರಾ.ರು ಇವರ ಹಿಂಸೆ ತಾಳಲಾರದೇ ಗೋವಾ ಬಿಟ್ಟು ಕರ್ನಾಟಕ ಕರಾವಳಿಗೆ ವಲಸೆ ಬಂದಿದ್ದು 17ನೇ ಶತಮಾನದ ಆದಿಯಲ್ಲಿ. ಈ ಚರಿತ್ರೆ ವಿಮರ್ಷಿಸಿದರೆ ದೈ.ಬ್ರಾ.ರಿಗೆ ಸೋದೆ ವಾದಿರಾಜ ಸಂಪರ್ಕ, ಭೇಟಿ ಆಗಿರಲೇ ಇಲ್ಲ ಎಂದು ತಿಳಿಯುತ್ತದೆ. ವಾದಿರಾಜರ ದೈವಜ್ಞರ ಸಂಬಂಧ, ಹಯಗ್ರೀವ ಮೂರ್ತಿ ಉದ್ಭವ ಘಟನೆಗಳೆಲ್ಲವೂ ಮಾಧ್ವ ಬುದ್ಧಿವಂತ ಪಂಡಿತರು ಸ್ವಾಮಿಗಳು ನಮ್ಮ ಹಿರಿಯರ ತಲೆಗೆ, ಹಿರಿಯರು ನಮ್ಮ ತಲೆಗೆ ತುರುಕಿದ ಕಾಲ್ಪನಿಕ ಹ್ಯಾರಿ ಪಾಟ್ಟರ್, ಸ್ಪೈಡರ್ ಮ್ಯಾನ್‌ನಂಥ ಮನರಂಜನಾತ್ಮಕ ಕಥೆಯಾಗಿತ್ತು ಎಂದು ಸಾಬೀತಾಗುತ್ತದೆ. ಅಲ್ಲವೇ?

11. ನೆನಪಿರಲಿ... ಪೂರ್ವಿಕರ ಪುರಾಣ ಕಾಲದಿಂದಲೂ ಇಂದಿನವರೆಗೂ ದೈವಜ್ಞ ಬ್ರಾಹ್ಮಣರು ಪೌರೋಹಿತ್ಯ, ಜ್ಯೋತಿಷ್ಯ, ಷಟ್ಕರ್ಮಗಳು ಹಾಗೂ ಚಿನ್ನಾಭರಣ, ಬೆಳ್ಳಿ ಕೆಲಸವಲ್ಲದೇ ಪಂಚಲೋಹದ ಕೆಲಸ, ಎರಕ ಹೊಯ್ಯುವ, ಕೆತ್ತುವ ಕೆಲಸ ಮಾಡಿದ ದಾಖಲೆಯೇ ಇಲ್ಲ. ಹಾಗಿದ್ದರೆ ವಾದಿರಾಜರಿಗೆ ದೈ.ಬ್ರಾ.ನು ಹಯಗ್ರೀವ ಮೂರ್ತಿ ಮಾಡಿಕೊಟ್ಟ ಎಂಬ ಘಟನೆಗೆ ಯಾವ ಆಧಾರವಿದೆ? ಸೋದೆ ಮಠದವರಲ್ಲಿ ಈ ಬಗ್ಗೆ ಏನಾದರೂ ದಾಖಲೆ ಇದೆಯೇ? ತಾಮ್ರ ಶಾಸನವಿದೆಯೇ?

ಹಯಗ್ರೀವ ಮೂರ್ತಿಯನ್ನು ಬಹುಶಃ ಪಂಚಶಿಲ್ಪಿಗಳಾದ ಗೌರವಾನ್ವಿತ ವಿಶ್ವಕರ್ಮ ಬ್ರಾಹ್ಮಣರೇ ಮಾಡಿಕೊಟ್ಟಿರಬಹುದು.

12. 1984ರಲ್ಲಿ ಶಿವಮೊಗ್ಗ ಸಮಾಜದ ಕಾರ್ಯಕ್ರಮಕ್ಕೆ ಬಂದಾಗ ದೈವಜ್ಞರು ನಿಬಂಧನೆ ಹಾಕಿದ ಮೇಲೆ ಸೋದೆಯ ಶ್ರೀ ವಿಶ್ವೋತ್ತಮ ತೀರ್ಥರು ಇನ್ನು ಮುಂದೆ ದೈವಜ್ಞ ಸಮಾಜದ ಯಾವುದೇ ಬಹಿರಂಗ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿ ಆ ಮೇಲೆ ಹಾಗೇ ನಡೆದುಕೊಂಡರು. ಈಗ 28 ವರ್ಷದ ನಂತರ, ಕಿರಿಯ ಪರ್ಯಾಯ ಸ್ವಾಮಿಗಳನ್ನು ಮುಂದಿರಿಸಿ ನಮ್ಮ ಸಮಾಜದಲ್ಲಿ ಒಡಕು ಮೂಡಿಸುವುದು ಯಾಕೆ? ಹಾಗೂ 2012ರ ಸೋದೆ ಪರ್ಯಾಯದ ಖರ್ಚಿಗಾಗಿ ದೈ. ಸಮಾಜದವರಲ್ಲಿ ಕೈಚಾಚಿ ಅಂಗಲಾಚುವುದು ನ್ಯಾಯವೇ? ಅವರಿಗೆ ಶೋಭೆಯೇ? ಅಷ್ಟಮಠಗಳಲ್ಲಿ ಅತ್ಯಂತ ಶ್ರೀಮಂತ ಮಠವೆಂದರೆ ಸೋದೆ ಮಠ.

13. ನಮ್ಮ ಸಮಾಜದ ಸರ್ವಾಂಗೀಣ ಉನ್ನತಿಗಾಗಿ, ಏಕತೆಗಾಗಿ ರೂಪಿಸುವ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿಕೊಂಡರೆ ಅದು ಗುರುದ್ರೋಹವಾಗಲಾರದು. ಮಧ್ವಮತ ಸ್ಥಾಪಕ ಶ್ರೀ ಮಧ್ವಾಚಾರ್ಯರೇ ಶ್ರೀ ಆದಿ ಶಂಕರಾಚಾರ್ಯರ ಶಿಷ್ಯ ಶ್ರೀಮದ್ ಹಸ್ತಾಮಲಕ ಯತಿಗಳ ಶಿಷ್ಯ ಶ್ರೀ ಅಚ್ಯುತ ಪ್ರೇಕ್ಷರಿಂದ ಅದ್ವೈತ ಸ್ಮಾರ್ಥ ದೀಕ್ಷೆ ಪಡೆದು ಕಡೆಗೆ ಆ ವಿದ್ಯೆ ಕಲಿಸಿದ ಗುರುವನ್ನೇ ನಿಂದಿಸಿ ದ್ವೈತ ಮತ ಸ್ಥಾಪಿಸಿದ್ದು, ಗುರುದ್ರೋಹವಲ್ಲವೇ??

14. ಸಾರಾಯಿ, ಕಳ್ಳು ತೆಗೆಯುವವರೊಂದಿಗೆ ಮೀನು ಹಿಡಿಯುವ ಬೆಸ್ತರು ಮದುವೆಯಾಗಿ ಹುಟ್ಟಿದವರೇ ಶಿವಳ್ಳಿ ಮಧ್ವವೈಷ್ಣವರು. ಪರಂಪರೆಯಿಂದ ಬ್ರಾಹ್ಮಣರಾದ ದೈವಜ್ಞರು ಅವರ ಪಾದಪೂಜೆ ಮಾಡುವ ಶಿಷ್ಯರಾಗುವುದು ನಿಮ್ಮ ಆತ್ಮಸಾಕ್ಷಿ ಒಪ್ಪುವುದೇ? (ನಮ್ಮ ಪೂರ್ವಿಕರ ಆತ್ಮಕ್ಕೆ ಖಂಡಿತಾ ಶಾಂತಿ ಸದ್ಗತಿ ದೊರಕಲಾರದು)

15. ದೈ.ಬ್ರಾ.ರು ಸಪ್ತ ಋಷಿ ಗೋತ್ರದವರು, ಸೂರ್ಯವಂಶಿಗಳು, ಸ್ಮಾರ್ಥ ಅದ್ವೈತ ಪರಂಪರೆಯ ಪಾಲಕರು, ಮೂಲತಃ ಭಸ್ಮಧಾರಿಗಳಾಗಿದ್ದು (ಉದಾ: ನಾನಾ ಶಂಕರ ಶೇಟ್ ಮುಂಬೈ, ಪಟಗಾಂವ್‌ನ ದಾದಾ ಮಹಾರಾಜ, ಗೋವಾ ಮಹಾರಾಷ್ಟ್ರದ ಕೇರ ದೈ.ಬ್ರಾ. ಸಮಾಜ ಬಾಂಧವರೆಲ್ಲರೂ ಈಗಲೂ ತಮ್ಮ ಸನಾತನ ಭಸ್ಮಧಾರಣೆ ಪರಂಪರೆಯನ್ನು ಉಳಿಸಿ ಬೆಳೆಸಿದ್ದಾರೆ) ಶಿವ ಶಕ್ತಿ ಕುಲದೇವರನ್ನು ಹೊಂದಿದ, ಋಗ್ವೇದಿಗಳಾಗಿದ್ದು, ಅಶ್ವಲಾಯನ ಸೂತ್ರ - ಯಾಕ್ ಶಾಖಲ ಶಾಖೆಯವರಾಗಿರುವರು. ಹರಿ - ಹರ ಎಂದು ಭೇಧ ಮಾಡದೇ ಪಂಚಾಯತನ ಶಿವ, ವಿಷ್ಣು, ಶಕ್ತಿ, ಗಣಪತಿ, ಸೂರ್ಯ ಪೂಜೆಗೆ ಮಹತ್ವ ನೀಡುತ್ತಾರೆ. ಶಿವರಾತ್ರಿ, ಅಷ್ಟಮಿ, ನವರಾತ್ರಿ ಶ್ರಾವಣ, ಸಂಕ್ರಾಂತಿ, ಚಾಂದ್ರಮಾನ ಯುಗಾದಿ, ಚೌತಿಯನ್ನು ಸಮಭಾವದಿಂದ ಆಚರಿಸುತ್ತಾರೆ. (ಮಾಧ್ವ ವೈಷ್ಣವರು, ಶಿವರಾತ್ರಿಯಲ್ಲಿ ಉಪವಾಸ, ಜಾಗರಣೆ ಮಾಡುವ ಬದಲು ಪಾಯಸ, ಹೋಳಿಗೆ ತಿನ್ನುತ್ತಾರೆ.) 400 ವರ್ಷ ನಾವು ಉಡುಪಿ ವೈಷ್ಣವರ ಕಪಿಮುಷ್ಟಿಯಲ್ಲಿದ್ದರೂ ಅವರಿಗೆ ದೈ.ಬ್ರಾ.ರ ಒಂದೇ ಒಂದು ಸಂಪ್ರದಾಯ ಆಚರಣೆಯನ್ನು ಬದಲಾಯಿಸಲು ಸಾಧ್ಯವಾಗಿಲ್ಲ. ನಮ್ಮ ಮೂಲಪರಂಪರೆಯನ್ನು ಹೀಗೆ ಕಾಪಾಡಿಕೊಂಡು ಬಂದ ನಮ್ಮ ಹಿರಿಯರನ್ನು ಇದಕ್ಕಾಗಿಯಾದರೂ ಅಭಿನಂದಿಸಿ, ಗೌರವಿಸಬೇಕಾಗಿದೆ.

16. "ದೈವಜ್ಞರು ಸ್ಮಾರ್ಥರು" - ಇದಕ್ಕೆ ಪ್ರಬಲ ಆಧಾರವೇನೆಂದರೆ, ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ಶ್ರೀಗಳು 1960ರಲ್ಲಿ ಮಂಗಳೂರು ದೈವಜ್ಞ ಬ್ರಾಹ್ಮಣ ಸಂಘದ (ರಿ) ರಜತ ಮಹೋತ್ಸವದ ಸ್ಮರಣ ಸಂಚಿಕೆಗೆ ಕಳುಹಿಸಿದ "ಶುಭ ಸಂದೇಶ"ದಲ್ಲಿ ಹೀಗೆ ಬರೆದಿದ್ದಾರೆ.. "ಸ್ವರ್ಣ ರತ್ನಾದಿ ಕೆಲಸಗಳಲ್ಲಿ ವಿಶೇಷ ಪಾಂಡಿತ್ಯವಿರುವ ಸ್ವರ್ಣಕಾರರು ಶ್ರೀಮಧ್ವಾಚಾರ್ಯರ ಅವತಾರದ ಮೊದಲು ಹೆಚ್ಚಿನವರು ಶಿವ ಶಕ್ತಿ ದೇವತೆಗಳೇ ಸರ್ವೋತ್ತಮರೆಂದು ತಿಳಿದು **ಉಪಾಸಿಸುತ್ತಿದ್ದಂತೆ ದೈವಜ್ಞ ಬ್ರಾಹ್ಮಣ ಸಮಾಜದವರ್ಯಾರೂ ಶ್ರೀ ಗುರುರಾಜ [ವಾದಿರಾಜ]ರ ಕಾಲದವರೆಗೆ ವೈಷ್ಣವರಾಗಿದ್ದಂತೇ ಕಂಡು ಬರುವುದಿಲ್ಲ!!!** ಅದೇ ಸಂಚಿಕೆಯಲ್ಲಿ "ಗೋಕರ್ಣ ಕ್ಷೇತ್ರ" ಲೇಖನದಲ್ಲಿ ವೇ. ಮೂ. ಜಟ್ಟಿಯ್ಯ ಅನಂತ ಭಟ್ (ಅಧ್ಯಕ್ಷರು : ಉ.ಕ. ಜಿಲ್ಲಾ ದೈವಜ್ಞ ಬ್ರಾಹ್ಮಣರ ಸಂಘ - 1960) ಹೀಗೆ ಬರೆಯುತ್ತಾರೆ... **"ನಮ್ಮ ದೈವಜ್ಞ ಸಮಾಜದ ಕೆಲವರು ಕಾರಾವಾರದವರೆಗೆ ವೈಷ್ಣವ ದೀಕ್ಷೆಯನ್ನು ಪಡೆದುಕೊಂಡಿರುತ್ತಾರೆ. ಮುಂದೆ ಗೋವಾ, ಮಹಾರಾಷ್ಟ್ರ ಕಡೆಗಳಲ್ಲಿರುವ ನಮ್ಮ ಸಮಾಜದವರು ಸ್ಮಾರ್ಥ, ಅದ್ವೈತ ಸಂಪ್ರದಾಯದಲ್ಲೇ ಇದ್ದಾರೆ. ಇವರು ಶ್ರೀ ಆದಿ ಶಂಕರಾಚಾರ್ಯರ ಪೀಠಕ್ಕೆ ಸೇರಿದವರು."**

17. 450 ವರ್ಷಗಳ ಈ ಮಾಧ್ವರ ಸಂಘ ದೋಷದಿಂದ ದೈ.ಬ್ರಾ.ರು ಯಾವುದೇ ರೀತಿಯಲ್ಲಿ ಪ್ರಗತಿ ಹೊಂದದೇ ತೀರಾ ಹಿಂದುಳಿದವರಾಗಿಯೇ ಇದ್ದರು. 5% ಇರುವ ನಮ್ಮ ಶ್ರೀಮಂತರು ಮಾತ್ರ 95% ದೈ. ಸಮಾಜವನ್ನು ಸೋದೆ ಮಠದ ಗುಲಾಮಗಿರಿ ಮಾಡಲು ಪ್ರೇರೇಪಿಸಿ ತಾವು ಮಾತ್ರ ಮಠದಿಂದ ಮೃಷ್ಟಾನ್ನ ಭೋಜನ, ಮಾನ, ಸನ್ಮಾನ ಪಡೆದು ಮೆರೆದರು. ಇನ್ನು ಹೀಗಾಗಬಾರದು. **1986ರಿಂದ ನಾವು ಸ್ವಸಮಾಜದ ಸ್ವತಂತ್ರ ಗುರುಪೀಠ - ಸಮರ್ಥ ಗುರುಗಳನ್ನು ಹೊಂದಿದ್ದೇವೆ.** ಅವರ ಆಶಯದಂತೇ ನಾವು ಜಾಗೃತರಾಗಿ, ಸ್ವಾಭಿಮಾನದೊಂದಿಗೆ ಪರಂಪರೆ, ಸಂಸ್ಕಾರ, ಆಚಾರ ವಿಚಾರವನ್ನು ಬೆಳೆಸಿ, ಉಳಿಸಿ ಸರ್ವರಂಗಗಳಲ್ಲಿಯೂ ಮುಂದುವರೆಯುವ ಸುವರ್ಣಾವಕಾಶವು ದೈವಜ್ಞ ಮಠದ ಸ್ಥಾಪನೆಯಿಂದ ಪ್ರಾಪ್ತವಾಗಿದೆ. **ಈಗ 430 ವರ್ಷಗಳ "ಗುಲಾಮಗಿರಿಯ ಬಾಡಿಗೆ ಅರಮನೆ"ಯಿಂದ ಪುನಃ ಸ್ವಾಭಿಮಾನ-ಗೌರವ"ವೆಂಬ ಸ್ವಂತ ಮನೆಗೆ ಮರಳಿ ಸ್ವಾಭಿಮಾನದಿಂದ ನಿಜವಾದ ಸ್ವಾತಂತ್ರ್ಯ ಅನುಭವಿಸುತ್ತಿದ್ದಾರೆ.**

ಗುಲಾಮಗಿರಿಗೆ ಒಗ್ಗಿ ಹೋದ ವಿಘಟಿತ ಮನಸ್ಸುಳಿಗೆ ಸದ್ಬುದ್ಧಿ ಬರುವವರೆಗೂ ಸಂಘಟಿತ ಸಮಾಜ ಸುಲಭವಲ್ಲ. ಇನ್ನೂ ಕೆಲವರದ್ದು "ಆಟ ಪಾಂಡವರಲ್ಲಿ ಊಟ ಕೌರವರಲ್ಲಿ" ಎಂಬ ನೀತಿ. ಇವರ ನಿಷ್ಠೆಯು ಬಗೆಗೂ ಪ್ರಶ್ನೆಗಳು ಸಂಶಯಗಳೇಳುತ್ತವೆ. ಕೆಲವು ಬುದ್ಧಿವಂತರು ಅಂಥ ಸಂಶಯ ಬರಬಾರದೆಂದು ಮುಖವಾಡಗಳನ್ನು ಕಿಸೆಯಲ್ಲೇ ಇಟ್ಟುಕೊಂಡಿರುತ್ತಾರೆ. ಈ ಗೋಸುಂಬೆಗಳು ಸಮಾಜಕ್ಕೆ ಮಾಡುವ ಹಾನಿ ಅಪಾರ.

ಅಂದು ವಾದಿರಾಜರು ಹಾಗೂ ಅವರ ಮಿಷನರಿ ಪಡೆ ಮಧ್ವ ವೈಷ್ಣವ ಸಾಮ್ರಾಜ್ಯ ವಿಸ್ತರಿಸಲು ನಮ್ಮನ್ನು ಮತಾಂತರಿಸಿದರು. ಇಂದು..... ಹಿಂದಿನಿಂದಲೂ ಸ್ವತಂತ್ರ ಗುರುಪೀಠದ ವಿರುದ್ಧವಾಗಿ ನಡೆದುಕೊಂಡವರು ತಮ್ಮ ಉಳಿವಿಗಾಗಿ, ತಾವು ಚಲಾವಣೆಯಲ್ಲಿರಲು 25 ವರ್ಷಗಳ ನಂತರ ಈಗ ಪುನಃ ಸೋದೆ ಮಠ, ಮುಖ್ಯ ಶಿಷ್ಯರು ಎಂದು ಈಗಲೂ ಹೊಟ್ಟೆ ಕಿಚ್ಚಿನಿಂದ ತಮ್ಮ ಹಠಬಿಡದೇ ಸೋದೆ ಮಠದ ಈಗಿನ ಬಾಲಗುರುಗಳಿಗೆ ತಪ್ಪು ಗ್ರಹಿಕೆ ಕೊಟ್ಟು ದೈವಜ್ಞ ಸಮುದಾಯದೊಳಗೆ ದ್ವೇಷ ಹರಡಿ, ಪರಸ್ಪರರನ್ನು ಎತ್ತಿ ಕಟ್ಟಿ ಸಮಾಜದ ಒಗ್ಗಟ್ಟಿಗೆ ಭಂಗತರುವ ಘೋರ ವಿಫಲ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಮ್ಮ ಮಧ್ಯೆ ಇರುವ ಅಗೋಚರ ಮೀರ್ ಸಾಧಿಕ್ ನಂತಹಾ ಸಮಾಜ ದ್ರೋಹಿಗಳು ಇವರಿಗೆ ಸಾಥ್ ನೀಡಲು ಹೋಗಿ ಸಮಾಜದಿಂದ ಛೀ! ಥೂ! ಎನ್ನಿಸಿ ತ್ರಿಶಂಕುಗಳಾಗಿ ಹೋಗಿದ್ದಾರೆ. "ಮನೆಗೆ ಮಾರಿ, ಊರಿಗೆ ಉಪಕಾರಿ"ಗಳಾದ ಈ ಪ್ರಚಾರ ಪ್ರಿಯರಾದ ಉಡುಪಿ ಮಠದ ಚೇಲಾಗಳ ಬಗ್ಗೆ ಸಮಸ್ತ ದೈವಜ್ಞ ಬ್ರಾಹ್ಮಣ ಸಮಾಜ ಜಾಗೃತವಾಗಬೇಕು.

ಶ್ರೀಕೃಷ್ಣನು ಅರ್ಜುನನಿಗೆ, ಶ್ರೀರಾಮನು ಹನುಮಂತನಿಗೆ ಅವರವರ ಸಾಮರ್ಥ್ಯ ತಿಳಿಸಿದಾಗ ಅವರ ಶಕ್ತಿ ಸಹಸ್ರಪಟ್ಟು ವೃದ್ಧಿಗೊಂಡು ಇತಿಹಾಸವೇ ಸೃಷ್ಟಿಯಾಯಿತು. ದೈವಜ್ಞ ಬ್ರಾಹ್ಮಣರಾದ ನಾವು ನಮ್ಮ ಪೂರ್ವವೃತ್ತಾಂತ - ಅಂತರ್ಗತವಾದ ಸಾಮರ್ಥ್ಯ ತಿಳಿದು ಸ್ವಸಮಾಜದ ಶ್ರೀಗುರುಗಳು - ಗುರುಪೀಠದಿಂದ ಅನುಗ್ರಹಿತರಾಗಿ ಧರ್ಮವನ್ನು ಮರೆಯದೇ ಸರ್ವ ಶಾಖೆಯಿಂದಲೂ ಪುನರುತ್ಥಾನ ಹೊಂದಬೇಕಾಗಿದೆ.

ಮಾನವ ಜನ್ಮದ ಪರಮಗುರಿ ಮೋಕ್ಷ. ಅದ್ವೈತಾನುಭವದಿಂದ ಮಾತ್ರ ಇದು ಸಾಧ್ಯ.

|| ಸ್ವಧರ್ಮೋ ರಕ್ಷತಿ ರಕ್ಷಿತಃ ||

- ಸ್ವಾಭಿಮಾನಿ, ಜಾಗೃತ ದೈವಜ್ಞ ಬ್ರಾಹ್ಮಣ.

ದೈವಜ್ಞರೇ ಇದು ನಿಮಗೆ ತಿಳಿದಿರಲಿ

ವಿದ್ಯಾವಂತರಾದವರು, ಅವಿದ್ಯಾವಂತರಾದ ದೈವಜ್ಞ ಬ್ರಾಹ್ಮಣರೇ,
ಪಟ್ಟಯ್ಯ ಆನಂತ ಭಟ್, ಗೋಕರ್ಣ ಹಾಗೂ ಅನೇಕ ದೈವಜ್ಞ ಬ್ರಾಹ್ಮಣರು

ದೈವಜ್ಞ ಬ್ರಾಹ್ಮಣರು ಇತಿಹಾಸವನ್ನು ಅಧ್ಯಯನ ಮಾಡಿದಾಗ 17ನೇ ಶತಮಾನದಲ್ಲಿ ಪೋರ್ಚುಗಿಸರ ದಬ್ಬಾಳಿಕೆಗೆ ಮಣಿದು ಉತ್ತರ ಗೋವದಿಂದ ವಲಸೆ ಬಂದು ದೈವಜ್ಞ ಬ್ರಾಹ್ಮಣರು ಕಾರವಾರದ ಸಮುದ್ರ ತೀರದಿಂದ ಮಂಗಳೂರಿನ ಸಮುದ್ರ ತೀರದವರೆಗೆ ಮತ್ತು ಕೆಲವರು ಕೇರಳದ ಸಮುದ್ರ ತೀರಕ್ಕೆ ಬಂದು ನೆಲೆಸಿದರಂತೆ ಹಾಗಾದರೆ 15ನೇ ಶತಮಾನದಲ್ಲಿ ಅಂತ್ಯದಲ್ಲಿ ಜನಿಸಿದ ವಾದಿರಾಜ ಸ್ವಾಮಿಯವರಿಗೆ ದೈವಜ್ಞ ಬ್ರಾಹ್ಮಣರ ಹಯಗ್ರಿವ ಮೂರ್ತಿಯನ್ನು ಕೊಟ್ಟಿದ್ದಾದರು ಎಂದು. ಇದು ಸೋದೆ ಮಠದ ಕಟ್ಟು ಕತೆಯೋ? ಅಥವಾ ಎಸ್.ಎಲ್ ಶೇಟ್ ಕುಟುಂಬಸ್ಥರ ಕಟ್ಟುಕತೆಯೋ ಈ ಕಥೆಗೆ ಬಲಿಯಾದದ್ದು ದೈವಜ್ಞ ಬ್ರಾಹ್ಮಣ ಸಮಾಜವೇ ಯೋಚಿಸಿರಿ ದೈವಜ್ಞರೇ.

ಜ್ಞಾನಕ್ಕೆ ಮೀಗಿಲಾದ ಸಂಪತ್ತಿಲ್ಲಾ ಅಜ್ಞಾನಕ್ಕೆ ಮೀಗಿಲಾದ ಬೀಕ್ಷುಕನಿಲ್ಲ.

ಶ್ರೀ ಸೋದೆ ಮಠಾಧೀಶರಿಂದ ತಾ। 5-12-1983ರಂದು ನಮಗೆ ಬಂದ ಪತ್ರದ ನಕಲು ಪ್ರತಿ

Sri Sode Vadiraja Mutt UDUPI (DK) 576 101

Ref. No.......................... Date 5 - 12 - 1983

ಬೆಂಗಳೂರು ದೈವಜ್ಞ ಬ್ರಾಹ್ಮಣ ಸಂಘ (ರಿ) ದ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರಿಗೆ ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು.

ತರುವಾಯ ದಿನಾಂಕ 24-11-83ರಲ್ಲಿ ನೀವು ವಿಚಾರ ಗೋಷ್ಠಿಯ ಪರವಾಗಿ ಬರೆದ ಪತ್ರ ತಲುಪಿ ಅಭಿಪ್ರಾಯವಾಯಿತು. ಮುಖ್ಯವಾಗಿ ನೀವು ನಿಮ್ಮ ಪತ್ರದಲ್ಲಿ ದೈವಜ್ಞ ಬ್ರಾಹ್ಮಣ ವಟುವಿಗೆ ಆಶ್ರಮ ಕೊಡುವ ವಿಚಾರವನ್ನು ನೀವು ವಿನಯದಿಂದ ವಿನಂತಿಸಿಕೊಂಡಿರುವಿರಿ. ಆದರೆ ನಾವು ಈ ಬಗ್ಗೆಯೇ ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿರುವಂತೆ ನಿಮ್ಮ ಅಪೇಕ್ಷೆಗೆ ಅನುಮೋದನೆ ನೀಡಲು ನಮಗೆ ಕೆಲವು ಅಡಚಣೆಗಳಿವೆ. ಅವುಗಳಲ್ಲಿ ಮುಖ್ಯವಾಗಿ ಶ್ರೀ ಗುರುರಾಜರ ಕಾಲದಿಂದಲೂ ನಮ್ಮ ಮಠದ ಪೀಠಾಧಿಪತಿಗಳು ಬೇರೆ ಪಂಗಡದವರಿಗೆ ಆಶ್ರಮವನ್ನಾಗಲೀ, ಪೀಠಾಧಿಪತ್ಯವನ್ನಾಗಲೀ ಕೊಟ್ಟಿರುವ ದಾಖಲೆ ಇಲ್ಲ. ಸಂಸ್ಥಾನದ ಸತ್ಸಂಪ್ರದಾಯವನ್ನು ನಾವು ಮೀರಿ ಸ್ವೇಚ್ಛೆಯಿಂದವಾಗಿ ಸ್ವತಂತ್ರವಾಗಿ ನಡೆಯಲು ಅಪೇಕ್ಷಿಸುವುದಿಲ್ಲ. ಆದುದರಿಂದ ಈ ವಿಚಾರದಲ್ಲಿ ನೀವು ಏನಾದರೊಂದು ಬದಲೀ ವ್ಯವಸ್ಥೆ ಮಾಡಿಕೊಳ್ಳಬೇಕಾಗಿ ನಾವು ಅಪೇಕ್ಷಿಸುತ್ತೇವೆ.

ನಮಗೂ ಈ ಡಿಸೆಂಬರ ತಿಂಗಳಲ್ಲಿ ರಾಜ್ಯದಲ್ಲಿ ಹಾಗೂ ಹೊರಗೂ ಅನೇಕ ಕಾರ್ಯಕ್ರಮಗಳಿರುವುದರಿಂದ ಈ ಸಂಬಂಧವಾಗಿ ಯಾವ ಸಮಾಲೋಚನೆ, ವಿಚಾರ ವಿನಿಮಯಗಳಿಗೂ ಹೆಚ್ಚಿನ ಅವಕಾಶವಿಲ್ಲದಿರುವುದರಿಂದ ನೀವು ಬರ ಬೇಕಾದ ನಿಶ್ಚಿತವಾದ ದಿನವನ್ನು ಸ್ಥಳವನ್ನೂ ತಿಳಿಸುವ ಕಾರಣ ನಮಗೆ ಸಾಧ್ಯವಿಲ್ಲ.

ಒಂದು ವಿಶಿಷ್ಟ ಸನಾತನ ಸಂಪ್ರದಾಯವನ್ನು ನಾವು ಮೀರಲಾರದ ಬಗೆಗಿರುವ ನಮ್ಮ ಸ್ವಾಭಿಪ್ರಾಯವನ್ನು ಅಭಿಮಾನಿಗಳಾದ ನೀವು ಅನ್ಯಥಾ ಭಾವಿಸಲಾರಿರೆಂದು ನಾವು ತಿಳಿಯುತ್ತೇವೆ. ಈ ವಿಚಾರದಲ್ಲಿ ಒಂದಲ್ಲ, ಇನ್ನೂ ಇಂತಹ ಅನೇಕ ಸಮಸ್ಯೆಗಳಿವೆ.

ಆದುದರಿಂದ ವಿಚಾರ ಗೋಷ್ಠಿಯ ಸದಸ್ಯರಾದ ನೀವು ಈ ವಿಚಾರದಲ್ಲಿ ಏನಾದರೊಂದು ಬದಲೀ ವ್ಯವಸ್ಥೆ ಮಾಡಿಕೊಳ್ಳಬೇಕಾಗಿಯೂ ನೀವು ಆಯ್ದುಕೊಳ್ಳುವ ವ್ಯವಸ್ಥೆಯಲ್ಲಿ ನಮ್ಮ ಯಾವ ಅಭ್ಯಂತರವು ಇಲ್ಲವೆಂದು ತಿಳಿಯಬೇಕಾಗಿಯೂ ನಾವು ಹಾರ್ದಿಕವಾಗಿ ನಿಮಗೆ ಈ ಮೂಲಕ ತಿಳಿಯ ಬಯಸುತ್ತೇವೆ.

ಇತ್ಯನೇಕ ಶ್ರೀಮನ್ನಾರಾಯಣ ಸ್ಮರಣೆಗಳು

ಸಹಿ/-

ಶ್ರೀ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರು